ಈ ಕೆಳಗಣ ಮಸವಿದಾ ಆಕ್ಟ್ನು ಅದರೊಂದಿಗಿರುವ ಉದ್ದೇಶಗಳ ಮತ್ತು ಕಾರಣಗಳ ವಿವರಣೆಯ ಸಮೇತವಾಗಿ, ಕೊಡಗಿನ ನ್ಯಾಯವಿಧಾಯಕ ಸಭೆಯಲ್ಲಿ ನ್ಯಾಯವಿಧಾಯಕ ಕೆಲಸವನ್ನು ನಿರ್ವಹಿಸುವುದಕ್ಕೆ ಎರ್ಪಟ್ಟ ಕ್ರಮಗಳ 33ನೇ ಕ್ರಮಕ್ಕನುಗುಣವಾಗಿ ಸಸುಸ್ಕ ಜನರ ತಿಳಿವಳಿಕೆಯಬಗ್ಗೆ ಪ್ರಕಟಿಸಲ್ಪಟ್ಟಿದೆ —

BILL No. I of 1925.

1925ನೇ ಇಸವಿಯ 1ನೇ ನಂಬರು ಬಿಲ್ಲು.

ಇಂಡಿಯಾ ಗವರ್ನ್‌ಮೆಂಟ್ ಆಕ್ಟಿನ 80 A (3) ನೇ ಪ್ರಕರಣದ ಮೇರೆಗೆ ಗವರ್ನರ್ ಜನರಲ್‌ರವರ ಮಂಜೂರಾತಿಯ ಮೇರೆಗೆ ಈ ಮುಂಜೂರಾತಿಯು 1925ನೇ ಇಸವಿ ಆಗಸ್ಟ್ 17ನೇ ತಾರೀಕಿನಲ್ಲಿ ಪಡೆಯಲಾಗಿದೆ

A BILL TO MAKE PROVISION FOR VILLAGE PANCHAYATS IN COORG.

ಕೊಡಗಿನಲ್ಲಿ ಗ್ರಾಮ ಪಂಚಾಯತಿಗಳಿಗೆ ವ್ಯವಸ್ಥೆಮಾಡುವರೆ ಉಂಟಾದ ಮಸವಿದಾ ಆಕ್ಟು.

ಪೀಠಿಕೆ

ಗ್ರಾಮಸ್ಥರೇ ಸ್ವತಃ ಗ್ರಾಮಕಾರ್ಯಗಳ ಆಡಳಿತೆಯನ್ನು ನಡಿಸುವಬಗ್ಗೆ ತಕ್ಕ ವಿಚಾರ ಮಾಡುವುದು ಮತ್ತು ತನ್ಮೂಲಕ ಸ್ವರಾಜ್ಯಾಡಳಿತೆಯ ಕ್ರಮವನ್ನು ಅಭಿವೃದ್ಧಿಪಡಿಸುವುದು ಯುಕ್ತವಾಗಿರುವುದರಿಂದ, ಇದರ ಮೂಲವಾಗಿ ಈ ಕೆಳಗಿನಂತೆ ನಿರ್ಣೈಸಲ್ಪಡುತ್ತಿದೆ —

1ನೇ ಅಧ್ಯಾಯ.

ಆರಂಭಣೆ.

ಹೆಸರು

1 ಈ ಆಕ್ಟ್ನು 1926ನೇ ಇಸವಿಯ ಕೊಡಗಿನ ಗ್ರಾಮ ಪಂಚಾಯತಿ ಆಕ್ಟು ಎಂಬುದಾಗಿ ಕರೆಯಲ್ಪಡಬಹುದು, ಮತ್ತು ಅದು ಕೂಡಲೇ ಚಾರಿಯಲ್ಲಿ ಬರತಕ್ಕದ್ದು

ಸ್ಥಳೀಕ ವ್ಯಾಪ್ತಿ

1907ನೇ ಇಸವಿಯ 2ನೇ ನಂಬರು 1900ನೇ ಇಸವಿಯ 6ನೇ ನಂಬರು

2 ಆದು 1907ನೇ ಇಸವಿಯ ಕೊಡಗಿನ ಮ್ಯುನಿಸಿಪಲ್ ರೆಗ್ಯುಲೇಷನು ಮತ್ತು 1900ನೇ ಇಸವಿಯ ಕೊಡಗಿನ ಡಿಸ್ಟ್ರಿಕ್ಟ್ ಫಂಡ್ ರೆಗ್ಯುಲೇಷನು ಅನುಕ್ರಮವಾಗಿ ಲಗಾವಾಗುವ ಮ್ಯುನಿಸಿಪಾಲಿಟಿಗಳ ಮತ್ತು ಜಾಹೀರು-ಮಾಡಲ್ಪಟ್ಟ ಪ್ರದೇಶಗಳ ವಿನಾ ಒಟ್ಟು ಕೊಡಗು ಸಂಸ್ಥಾನಕ್ಕೆ ವ್ಯಾಪಿಸುತ್ತದೆ.

ಅರ್ಥ ವಿವರಣೆಗಳು

3 ಈ ಆಕ್ಟಿನಲ್ಲಿ ವಿಷಯದರ್ಶ್ಯಾಗಲಿ ಸಂದರ್ಭದರ್ಶ್ಯಾಗಲಿ ವಿರೋಧವಾಗಿ ಎನಾದರೂ ಇದ್ದರೇನೆ ವಿನಾ,

(1) "ಆಕ್ಟಿಡ" ಎಂಬುದರಲ್ಲಿ ಒಂದು ಮನೆ, ಅಂಗಡಿ, ಮಳಿಗೆ, ಕಾರ್ಖಾನೆ, ಗುಡಿಸಲು ಮತ್ತು ವೈಯ್ಯಾಪುರಿಯು ಸೇರುತ್ತಿದೆ

1878ನೇ ಇಸವಿಯ 7ನೇ ನಂಬರು

(2) "ಸಾರೆಸ್ಟ್ (ಕಾಡು)" ಎಂಬುದರಲ್ಲಿ 1878ನೇ ಇಸವಿಯ ಇಂತಿಯಿಡ ಕಾಡುಗಳ ಆಕ್ಟಿನ ಮೇರೆಗೆ ಗವರ್ನ್‌ಮೆಂಟಿನವರ ವಿನಿಯೋಗದಲ್ಲಿರುವ ಸುಕಕ್ಕಿಸಲ್ಪಡದ ಜಮೀನು ಮತ್ತು ಸುದಕ್ಕಿಸಿಡಲ್ಪಟ್ಟ -ಯೂ ಕಾವಾಡಲ್ಪಟ್ಟ ಕಾಡು ಸೇರುತ್ತದೆ,

(3) "ಪಂಚಾಯತಿ" ಎಂದರೆ ಈ ಆಕ್ಟಿನ ಎತ್ತಾ ಅಥವಾ ಯಾವುದಾದರೂ ಉದ್ದೇಶಗಳನ್ನು ನೆರವೇರಿಸುವಬಗ್ಗೆ ಈ ಆಕ್ಟಿನ ಮೇರೆಗೆ ಎರ್ಪಟ್ಟ ಮನುಷ್ಯರ ಕೂಟವೆಂದು ಅರ್ಥವು,

(4) "ಪಂಚಾಯತಿದಾರ" ಎಂದರೆ ಒಂದು ಪಂಚಾಯತಿಯ ಮೆಂಬರನು ಎಂದು ಅರ್ಥವು,

(5) "ನಿರ್ದೇಶಿಸಲ್ಪಟ್ಟ" ಎಂದರೆ ಈ ಆಕ್ಟಿನ ಮೇರೆಗೆ ಮಾಡೋಣಾದ ಕ್ರಮಗಳಿಂದ ನಿರ್ದೇಶಿಸಲ್ಪಟ್ಟ ಎಂದು ಅರ್ಥವು,

(6) "ರವಿನ್ಯೂ ಗ್ರಾಮ" ಎಂದರೆ ರವಿನ್ಯೂ ಲೆಕ್ಕಗಳಲ್ಲಿ ಒಂದು ಗ್ರಾಮವೆಂಬುದಾಗಿ ಆಂಗೀಕರಿಸಲ್ಪಟ್ಟಿರುವ ಯಾವುದೊಂದು ಸ್ಥಳೀಕ ಪ್ರದೇಶವು ಎಂದು ಅರ್ಥವು, ಮತ್ತು

(7) "ಗ್ರಾಮ" ಎಂದರೆ ಈ ಆಕ್ಟಿನ ಉದ್ದೇಶಗಳ ಬಗ್ಗೆ ಒಂದು ಗ್ರಾಮವೆಂಬುದಾಗಿ ಚೀಫ್ ಕಮಿಷನರವರಿಂದ ವಿಧಿಸಲ್ಪಟ್ಟ ಯಾವುದೊಂದು ಪ್ರದೇಶವು ಎಂದು ಅರ್ಥವು.

2ನೇ ಅಧ್ಯಾಯ.

ಪಂಚಾಯತಿಗಳ ವಿಚಾರಣೆ.

ಪಂಚಾಯತಿಗಳನ್ನು ಸಸುಸೂಚನೆ ಮತ್ತು ತೆಗೆದುಹಾಕೋಣ

4 (1) ಚೀಫ್ ಕಮಿಷನರವರು —

(a) ಈ ಆಕ್ಟಿನ ಎತ್ತಾ ಅಥವಾ ಯಾವುದಾದರೂ ಉದ್ದೇಶಗಳನ್ನು ನೆರವೇರಿಸುವಬಗ್ಗೆ ಯಾವುದೊಂದು ಗ್ರಾಮ ಕ್ಕೋಸ್ಕರ ಒಂದು ಪಂಚಾಯತಿಯು - ಯೂ ಪಂಚಾಯತಿಗಳು ಎರ್ಪಡಿಸೋಣಾಗಬೇಕೆಂದು ನಿರ್ದೇಶಿಸಲ್ಪಟ್ಟ ರೀತಿಯಲ್ಲಿ ಇಸ್ಮಿಹಾರುಕೊಡುವ ಮೂಲಕ ಅಜ್ಞಾಪಿಸಬಹುದು, ಮತ್ತು

(b) ಯಾವ ಕಾಲದಲ್ಲಾಗಲಿ ಅಂಥಾ ಇಸ್ಮಿಹಾರನ್ನು ತಬ್ಬಿಲುಮಾಡಲು ಅಥವಾ ರದ್ದುಮಾಡಲು ಬಹುದು.

(2) ಈ ಆಕ್ಟಿನ ನಿಬಂಧನೆಗಳು, (1) ನೇ ಒಳಪ್ರಕರಣದ ಮೇರೆಗೆ ಪ್ರಜುರುಗೊಳಿಸಲ್ಪಟ್ಟ ಇಸ್ಮಿಹಾರನ್ನೆ ನಮೂದಿಸಲ್ಪಡಬಹುದಾದಂಥಾ ತಾರೀಖಿನಲ್ಲಿ ಯಾವುದೊಂದು ಗ್ರಾಮದಲ್ಲಿ ಅಥವಾ ಸಂಗತ್ಯನುಸಾರವಾಗಿ, ಅದರ ಭಾಗದಲ್ಲಿ ಜಾರಿಯಲ್ಲಿ ಬರಲು -ಯೂ- ಅದಕ್ಕೆ ಲಗಾವಾಗುವುದು ನಿಂತು ಹೋಗಲು ತಕ್ಕದ್ದು

ಪಂಚಾಯತಿಗಳ ಮೆಂಬರರ ಸಂಖ್ಯೆ ಮತ್ತು ಅವುಗಳ ನಿರ್ಣಾಡು

5 (1) ಒಂದು ಪಂಚಾಯತಿಯಲ್ಲಿ ಚೀಫ್ ಕಮಿಷನರವರು ಕ್ಲಿಪ್ತಪಡಿಸಬಹುದಾದಷ್ಟು ಸಂಖ್ಯೆಯ ಮೆಂಬರುತಕ್ಕದ್ದು, ಮತ್ತು ಅಂಥಾ ಸಂಖ್ಯೆಯು ಹದಿನೈದಕ್ಕಿಂತ ಹೆಚ್ಚಾಗಿಯೂ ಏಳಕ್ಕಿಂತ ಕಡಿಮೆಯಾಗಿಯೂ ಇರತಕ್ಕುದಲ್ಲ

(2) ಒಂದು ರವಿನ್ಯೂ ಗ್ರಾಮಕ್ಕಿಂತ ಅಧಿಕ ಗ್ರಾಮಗಳ ಬಗ್ಗೆ ಒಂದು ಪಂಚಾಯತಿಯು ಏರ್ಪಟ್ಟಲ್ಲಿ, ಪ್ರತಿ ರವಿನ್ಯೂ ಗ್ರಾಮಕ್ಕೆ ಹಂಚಿ ಹಾಕಲ್ಪಡಬೇಕಾದ ಮೆಂಬರರ ಸಂಖ್ಯೆಯನ್ನು ಚೀಫ್ ಕಮಿಷನರವರು ನಿರ್ಣೈಸಕ್ಕದ್ದು

(3) ಮೆಂಬರರು ನಿರ್ದೇಶಿಸಲ್ಪಟ್ಟ ರೀತಿಯಲ್ಲಿ ಚುನಾಯಿಸಲ್ಪಡತಕ್ಕದ್ದು

ಓಟರರ ಯೋಗ್ಯತೆಗಳು

6 (1) ಗ್ರಾಮದ ವಾಸಸ್ಥನಾದ ಮತ್ತು 25 ವರುಷ ವಯಸ್ಸು ದಾಟಿರುವ ಪ್ರತಿ ಗಂಡಸು ಪಂಚಾಯತಿದಾರರ ಚುನಾವಣೆಯಲ್ಲಿ ಓಟುಕೊಡುಲು ಅರ್ಹನಾಗಿರತಕ್ಕದ್ದು.

(2) (1) ನೇ ಒಳಪ್ರಕರಣದ ಉದ್ದೇಶದಬಗ್ಗೆ ಒಬ್ಬ ಮನುಷ್ಯನ ವಯಸ್ಸಿನ ಅಥವಾ ವಾಸಸ್ಥೆಯ ಕುರಿತು ಉಂಟಾದ ಯಾವ ವಿವಾದವಾಗಲಿ ನಿರ್ದೇಶಿಸಲ್ಪಟ್ಟ ರೀತಿಯಲ್ಲಿ ನಿರ್ಣೈಸಲ್ಪಡತಕ್ಕದ್ದು

ಅಮೀದುವಾರರ ಯೋಗ್ಯತೆಗಳು

7 ಪಂಚಾಯತಿದಾರರ ಒಂದು ಚುನಾವಣೆಯಲ್ಲಿ ಓಟುಕೊಡಲು ಅರ್ಹನಾದ ಪ್ರತಿ ಮನುಷ್ಯನು ಒಬ್ಬ ಪಂಚಾಯತಿದಾರನಾಗಿ ಚುನಾಯಿಸಲ್ಪಡುವರೆ ಯೋಗ್ಯತೆಯುಳ್ಳವನಾಗಿರತಕ್ಕದ್ದು

ಪಂಚಾಯತಿಯ ಪ್ರೆಸಿಡೆಂಟನು ಚುನಾಯಿಸಲ್ಪಡತಕ್ಕದ್ದು.

8 ಪ್ರತಿ ಪಂಚಾಯತಿಯವರು ತಮ್ಮು ಮೆಂಬರರ ಸೈಕೆ ಒಬ್ಬನನ್ನು ತಮ್ಮ ಪ್ರೆಸಿಡೆಂಟನಾಗಿ ಚುನಾಯಿಸಿಕೊಳ್ಳತಕ್ಕದ್ದು.

ಪಂಚಾಯತಿದಾರನಿಗೆ ಪ್ರೆಸಿಡೆಂಟನ ಅಧಿಕಾರಗಳನ್ನು ತಾತ್ಕಾಲಿಕವಾಗಿ ಒಪ್ಪಿಸಿಕೊಡೋಣ

9 ಪ್ರೆಸಿಡೆಂಟನು ತನ್ನ ತಾತ್ಕಾಲಿಕವಾದ ಗೈರ್ಹಾಜರಿಯ ಅಥವಾ ಅಸಮರ್ಥತೆಯ ಕಾಲದಲ್ಲಿ ತನ್ನ ಯಾವುವಾದರೂ ಅಧಿಕಾರಗಳನ್ನು ಅಥವಾ ಕರ್ತವ್ಯಗಳನ್ನು ಬರಮೊಲವಕವಾದ ಒಂದು ಹುಕುಮಿನ ಮೂಲಕ ಒಬ್ಬ ಪಂಚಾಯತಿದಾರನಿಗೆ ಒಪ್ಪಿಸಿಕೊಡಬಹುದು

ಪರಂತು ಯಾವ ಅಧಿಕಾರಗಳನ್ನಾಗಲಿ ಕರ್ತವ್ಯಗಳನ್ನಾಗಲಿ ಅತನು ಒಪ್ಪಿಸಿಕೊಡಕೂಡದೆಂದು ಪಂಚಾಯತಿಯವರು ಕಂಡೆಕ್ಟಾಗಿ ನಿಷೇಧಿಸುತ್ತಿರೋ ಆ ಯಾವುದಾದರೂ ಅಧಿಕಾರಗಳನ್ನು ಅಥವಾ ಕರ್ತವ್ಯಗಳನ್ನು ಅತನು ಒಪ್ಪಿಸಿಕೊಡತಕ್ಕುದಲ್ಲ

ಪಂಚಾಯತಿದಾರನ ಮತ್ತು ಪ್ರೆಸಿಡೆಂಟನ ಉದ್ಯೋಗದ ಅವಧಿ

10. (1) ಒಬ್ಬ ಪಂಚಾಯತಿದಾರನ ಉದ್ಯೋಗದ ಅವಧಿಯು ಅತನು ಚುನಾವಣೆಯಾದ ತಾರೀಕಿನಿಂದ ಮೂರು ವರುಷವಾಗಿರತಕ್ಕದ್ದು.

(2) ಒಬ್ಬ ಪ್ರೆಸಿಡೆಂಟನು ಪಂಚಾಯತಿದಾರನಾಗಿರುವ ಅತನ ವಾಸುದೆಯು ಮುಗಿಯುವಾಗ ಅಥವಾ ಅತನು ಒಬ್ಬ ಪಂಚಾಯತಿದಾರನಾಗಿರೋದನ್ನು ಅನ್ಯಥಾ ನಿಂತುಹೋಗುವಾಗ ತನ್ನ ಉದ್ಯೋಗವನ್ನು ಖಾಲಿ ಮಾಡಿರುತ್ತಾನೆಯೆ ಭಾವಿಸಲ್ಪಡತಕ್ಕದ್ದು.

ಪಂಚಾಯತಿದಾರನನ್ನಾಗಲಿ ಪ್ರೆಸಿಡೆಂಟನನ್ನಾಗಲಿ ತೆಗೆದು ಹಾಕುವಲ್ಲಿ ಅಧಿಕಾರತ.

11. ಚೀಫ್ ಕಮಿಷನರವರು ಯಾವ ಪಂಚಾಯತಿದಾರನನಾಗಲಿ ಪ್ರೆಸಿಡೆಂಟನಾಗಲಿ —

(a) ಒಂದು ಕ್ರಿಮಿನಲ್ ಕೋರ್ಟಿನವರಿಂದ ನೀರಿನ ಆಜ್ಞೆ ಯಯ್ಯಲ್ಪಡುವ ತಿಕ್ಕೆ ಅಥವಾ ಒಂದು ತಿಂಗಳಿಗೆ ಒರಿದ ವಾಯಿದೆಯ ಕೈದು ತಿಕ್ಕೆ ವಿಧಿಸಲ್ಪಟ್ಟಿದ್ದು, ಅಂಥಾ ತಿಕ್ಕೆಯು ತೆಗೆದು ಹಾಕಲ್ಪಡದಿದ್ದರೆ ಅಥವಾ ತಕ್ಕೀರು ಕ್ಷಮಿಸಲ್ಪಡದಿದ್ದರೆ, ಅಥವಾ

(b) ಕೆಲಸನೊಡ್ಡಿಸು ನಿರಾಕರಿಸಿದರೆ ಅಥವಾ ಕೆಲಸ ಮಾಡುವರೆ ಅಸಮರ್ಥನಾಗಿದ್ದರೆ, ಅಥವಾ

(c) ಒಬ್ಬ ವಿವೇಕ ಅಥವಾ ನಿರ್ಧಾರವಿಯೂ ಇತ್ಯರ್ಥಗೊಳ್ಳತಕ್ಕದೆಂದು ಮನವಿ ಮಾಡಿದರೆ ಅಥವಾ ಇತ್ಯರ್ಥಗೊಳ್ಳಲ್ಪಟ್ಟಿದೆ ಅಥವಾ

* 1898ನೇ ಇಸವಿಯ 5ನೇ ನಂಬರು

(d) 1898ನೇ ಇಸವಿಯ ಕ್ರಿಮಿನಲ್ ಪ್ರೊಸೀಜರ್ ಕೋಡಿನಮೇರೆಗೆ ಒಳ್ಳೇ ನಡತೆಯಬಗ್ಗೆ ಜಾಮೀನು ಕೊಡತಕ್ಕ ಪ್ರಕಾರ ಹುಕುಂ ಮಾಡಲ್ಪಟ್ಟಿದ್ದರೆ, ಅಥವಾ

(e) ತನ್ನ ಕರ್ತವ್ಯಗಳನ್ನು ನಿರ್ವಹಿಸುವುದಲ್ಲಿ ಪಡೆಯಬಗ್ಗೆ ತಪ್ಪಿತಸ್ಥನಾಗಿದ್ದರೆ,

ಆ ಪಂಚಾಯತಿದಾರನನ್ನು ಅಥವಾ ಪ್ರೆಸಿಡೆಂಟನ ಉದ್ಯೋಗದಿಂದ ತೆಗೆದು ಹಾಕಬಹುದು

ಉದ್ಯೋಗಕ್ಕೆ ರಾಜೀನಾಮೆ ಕೊಡೋಣ ಮತ್ತು ಖಾಲಿಗಳನ್ನು ಭರ್ತಿ ಮಾಡೋಣ

12 (1) ಒಬ್ಬ ಪಂಚಾಯತಿದಾರನಾಗಲಿ ಪ್ರೆಸಿಡೆಂಟನಾಗಲಿ ಸಂಚಾಯತಿಯವರಿಗೆ ನೋಟೀಸುಕೊಟ್ಟು ತನ್ನ ಉದ್ಯೋಗಕ್ಕೆ ರಾಜೀನಾಮೆ ಕೊಡಬಹುದು

(2) ಪಂಚಾಯತಿದಾರನ ಅಥವಾ ಪ್ರೆಸಿಡೆಂಟನ ಉದ್ಯೋಗವು ಖಾಲಿ ಬಿದ್ದಲ್ಲಿ, ಮೇಲೆ ಹೇಳಲ್ಪಟ್ಟ ನಿಬಂಧನೆಗಳನುಸಾರವಾಗಿ ಒಬ್ಬ ಹೊಸ ಪಂಚಾಯತಿದಾರನನ್ನು ನಿಮಿಸಿಕೊಟ್ಟನಾಗಲಿ ಚುನಾಯಿಸಲ್ಪಡತಕ್ಕದ್ದು.

ಖಾಲಿ ಇರುವ ದಿನಂಪ್ರತಿ ಅಥವಾ ಅಲ್ಪಮಿತ ದಿನಂಪ್ರತಿ ಯಿತಿಯವರೆಗೆ ಕೆಲಸವು ಅನಾಧುವಾಗತಕ್ಕದ್ದಲ್ಲ

13 ಒಂದು ಪಂಚಾಯತಿಯವರು ನಡಿಸಿದ ಯಾವ ಕಲಸವಾಗಲಿ, ಅದು ನಡೆದ ಕಾಲದಲ್ಲಿ ಇದ್ದ ಮೆಂಬರರಲ್ಲಿ ಯಾವನೊಬ್ಬನು ಮೆಂಬರನಾದ ಸಂಖ್ಯೆಗಿಂತ ಕಡಿಮೆಯಾಗಿತ್ತೆಂಬ ಕಾರಣವಾ ಪಂಚಾಯತಿದಾರನ ಅಥವಾ ಪ್ರೆಸಿಡೆಂಟನ ಚುನಾವಣೆಯಲ್ಲಿ ಯಾವುದೊಂದು ಅಕ್ರಮವು ನಡಿದ ಕಾರಣದಿಂದ ಮಾತ್ರವೇ ಅನಾಧುವೆಂದು ಭಾವಿಸಲ್ಪಡತಕ್ಕದ್ದಲ್ಲ.

ಪಂಚಾಯತಿಗಳನ್ನು ವಿಸ್ತರಿಸೋಣ

14 ಪ್ರತಿ ಪಂಚಾಯತಿಯವರು, ಚೀಫ್ ಕಮಿಷನರು ನಿರ್ಣೈಸುವುದಾದಂಥ ಹೆಸರಿನಿಂದ ಒಂದು ವಿಸ್ತರಣೋತಾದ ಕೂಟವಾಗಿರತಕ್ಕದ್ದು, ಮತ್ತು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯಕಿವಾದ ಒಂದು ಮೊಹರನ್ನು ಉಳ್ಳವರಾಗಿರತಕ್ಕದ್ದು, ಮತ್ತು ಅವರು ಸ್ಥಿರ ಪೆಸರಿನಿಂದ ವ್ಯಾಜ್ಯಮಾಡಲು - ವೆ ವ್ಯಾಜ್ಯ ಮಾಡಲ್ಪಡತಕ್ಕದ್ದು. ಈ ಕುರಿತು ಚೀಫ್ ಕಮಿಷನರವರು ಮಾಡುವ ಯಾವುದಾದರೂ ನಿಬಂಧನೆಗಳಿಗೊಳಪ್ಪಟ್ಟು, ಪಂಚಾಯತಿಗಳು ಸ್ಥಿರ ಸೊತ್ತನ್ನಾಗಲಿ ಸೊತ್ತಿನಾದಿನುವುದಕ್ಕೂ, ಮಾರುವುದಕ್ಕೂ - ಯೂ - ಪರಭಾರೆ ಮಾಡುವುದಕ್ಕೂ, ಕರಾರುಗಳನ್ನು ಮಾಡಿಕೊಳ್ಳುವುದಕ್ಕೂ, ಈ ಆಕ್ಟಿನ ಉದ್ದೇಶಗಳಿಗೆ ಸ್ಥಿರ ಅಗತ್ಯವಾದ ಇತರ ಯಾವುದೇ ಕೆಲಸಗಳನ್ನು ಮಾಡುವುದಕ್ಕೂ ಆವರಿಗೆ ಅಧಿಕಾರವಿರತಕ್ಕದ್ದು

3ನೇ ಅಧ್ಯಾಯ.

ಕರ್ತವ್ಯಗಳು ಮತ್ತು ಅಧಿಕಾರಗಳು.

ಪಂಚಾಯತಿಗಳ ಕರ್ತವ್ಯಗಳು

15 ಚೀಫ್ ಕಮಿಷನರವರು ನಿರ್ದೇಶಿಸಬಹುದಾದ ಕ್ರಮಗಳಿಗೊಳಪ್ಪಟ್ಟು, ಒಂದು ಪಂಚಾಯತಿಯವರು ಈ ಆಕ್ಟಿಗೆ ಅನುರೂಪವಿರಲ್ಪಟ್ಟ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನೆರವೇರಿಸಲು ಒಹುದು, —

(i) ಗ್ರಾಮ ರಸ್ತೆಗಳನ್ನು, ಮೊಹಡಿಗಳನ್ನು, ನೇತ್ಯಗಳನ್ನು ಮತ್ತು ಕಟ್ಟಡಗಳನ್ನು ಕಟ್ಟೋಣ ಮತ್ತು ಕಾಪಾಡಿಕೊಂಡು ಬರೋಣ

(ii) ಬೀದಿಗಳಲ್ಲಿಯೂ ಸಾರ್ವಜನಿಕ ಸ್ಥಳಗಳಲ್ಲಿಯೂ ದೀಪಗಳನ್ನು ಇಡಿಸೋಣ

(iii) ಚರಂಡಿಗಳನ್ನು ಕಟ್ಟೋಣ ಮತ್ತು ಚರಂಡಿಯ ನೀರಿನ ಮತ್ತು ಕಕ್ಕುಲ ನೀರಿನ ವಿಲೆವಾರಿ,

(iv) ಬೀದಿಗಳನ್ನು ತುಚ್ಚಪಡಿಸೋಣ, ಕಸಕುಪ್ಪೆಗಳನ್ನು, ಕಾಡುಗಿಡಗಳನ್ನು ಮತ್ತು ಚಪ್ಪಾತ್ರಿ ಕಳ್ಳಿಯನ್ನು ತೆಗೆದೊಯ್ಯೋಣ, ಉಪಯೋಗದಲ್ಲಿಲ್ಲದ ಬಾವಿಗಳನ್ನು, ಆರೋಗ್ಯಕರವಾದ ಕೊಳಗಳನ್ನು, ಕುಂಟೆಗಳನ್ನು, ತಂದಕಗಳನ್ನು, ಹೊಂಡಗಳನ್ನು ಯೂ ಗುಂಡಿಗಳನ್ನು ಮುಚ್ಚಿ ಬಿಡೋಣ ಮತ್ತು ಗ್ರಾಮದ ಆರೋಗ್ಯ ಸ್ಥಿತಿಯ ಸಂಬಂಧವಾದ ಇತರ ಅಭಿವೃದ್ಧಿಗಳನ್ನು,

(v) ಸಾರ್ವಜನಿಕ ಪಾಯಿಖಾನೆಗಳನ್ನು ಏರ್ಪಡಿಸೋಣ ಮತ್ತು ಪಾಯಿಖಾನೆಗಳು ಸಾರ್ವಜನಿಕವಾಗಿದ್ದರೂ ಖಾಸಗಿಯವಾಗಿದ್ದರೂ ಅವುಗಳನ್ನು ಸುಯೋಗ್ಯವಾಗಿ ಇಡುವುದಕ್ಕೂ ಅವನ್ನು ತುಚ್ಚಪಡಿಸುವರೆ ವೇಷ ಏರ್ಪಾಡುಗಳು,

(vi) ದಹನವಾಡುವ ಘಾಟುಗಳನ್ನು ಮತ್ತು ತೊಳುವ (ದಫನ್ ಮಾಡುವ) ಸ್ಥಳಗಳನ್ನು ಏರ್ಪಡಿಸಿ ನಡೆಸಿಕೊಂಡು ಬರೋಣ,

(vii) ಪಾಪಿಗಳನ್ನು ಅಗಿದೋಣ - ವೆ - ದುಡುಸಿನವರೋಣ, ಪಾಸನೂಡುವನ್ನು ಜಗಿಯುವ - ವೆ - ವಿಷಯುನ ಉದ್ದೇಶಗಳಿಗಾಗಿ ಬೇಕಾದ ನೀರನ್ನು ಸರಬರಾಯಿ ಮಾಡುವುದಕ್ಕೆ ಕೊಳಗಳನ್ನು - ಯೂ - ಕೆರೆಗಳನ್ನು ತೋಡೋಣ, ದುರುಸ್ತಿ ಮಾಡೋಣ - ವೆ - ನಡಿಸಿಕೊಂಡು ಬರೋಣ ಮತ್ತು ಸ್ನಾನದಬ್ಬಕ್ಕೆ ಘಾಟುಗಳನ್ನು ಕಟ್ಟೋಣ,

(viii) ಬಾಸುವಾಸುಗಳು ನಿಲ್ಲುವ ಸ್ಥಳಗಳ, ಕಣಗಳ, ತೋಪುಗಳ ಮತ್ತು ಮಹಾಜನರಿಗೆ ಸೇರಿದ ಇತರ ಪೊಲೀಸುಗಳ ಮೇಲ್ವಿಚಾರ

(ix) ಚಾವಡಿಗಳ, ಧಕ್ಕಗಳ, ನಿಶ್ರಾಂತಿಯ ಮನೆಗಳ ಮತ್ತು ಗ್ರಾಮಸ್ಥರಿಗೆ ಸಾಮೂಹಿಕವಾಗಿ ಸೇರಿದ ಇತರ ಸ್ಥಿತಿಗಳ ಮೇಲ್ವಿಚಾರಣೆ;

(x) ಗ್ರಾಮ ನತ್ಯಗಳನ್ನು ಜಪಾಯಿಸೋಣ ಮತ್ತು ಕಟ್ಟುಪಡಗಳನ್ನು ಕಟ್ಟೋಣವನ್ನು ಕ್ರಮಪಡಿಸೋಣ;

(xi) ದಾಳು ಹಾಕುವುದನ್ನು ಜಾರಿಯಲ್ಲಿ ತರೋಣ.

(xii) ಜನನಗಳನ್ನೂ ಮರಣಗಳನ್ನೂ ರಚಿಸ್ತಿನೂಡೋಣ,

(xiii) ಗ್ರಾಮ ಪುಸ್ತಕಾಲಯಗಳನ್ನು ಸ್ಥಾಪಿಸಿ ನಡಿಸಿಕೊಂಡು ಬರೋಣ;

(xiv) ದೊಡ್ಡಿಗಳ ಮೇಲ್ವಿಚಾರಣೆ,

(xv) ಗ್ರಾಮ ರಕ್ಷಣೆ, ಮತ್ತು

(xvi) ಗ್ರಾಮಸ್ಥರ ಭದ್ರತೆ, ಆರೋಗ್ಯ, ಸೌಕರ್ಯ -ಯೂ- ಅನುಕೂಲ್ಯವನ್ನು ಅಭಿವೃದ್ಧಿಪಡಿಸುವುದಕ್ಕೆ ಸಾಧಕವಾದ ಸಾರ್ವಜನಿಕ ಉಪಯೋಗದ ಇತರ ವಿಚಾರಗಳು

ಯಾವ ಕರ್ತವ್ಯಗಳನ್ನು ಚಲಾಯಿಸುವಂತೆ ಪಂಚಾಯತಿಯನ್ನು ಒಂದು ಸ್ಕೂಲ್‌ಕ ಬೋರ್ಡಿನವರು ಅಧಿಕಾರಗೊಳಿಸಬಹುದೊಂದು

16. ಡಿಸ್ಟ್ರಿಕ್ಟ್ ಬೋರ್ಡಿನವರು, ಪಂಚಾಯತಿಯಿಲ ನಿಮ್ಮತಿಯನ್ನು ಪಡೆದು ಮತ್ತು ಒಪ್ಪಿಕೊಳ್ಳಲ್ಪಡಬಹುದಾದಂಥ ಶರತ್ತುಗಳಿಗೊಳಪಟ್ಟು, 1900 ನೇ ಇಸವಿಯ ಕೊಡಗು ಡಿಸ್ಟ್ರಿಕ್ಟ್ ಫಂಡ್ ರೆಗ್ಯುಲೇಶನ್ ಪ್ರಕಾರ ಬೋರ್ಡಿನವರು ನ್ಯಾಯವಾಗಿ ಚಲಾಯಿಸಬಹುದಾದ ಈ ಕೆಳಗಿನ ಯಾವುದಾದರೂ ಕರ್ತವ್ಯಗಳನ್ನು ಚಲಾಯಿಸುವಂತೆ ಅಂಥಾ ಪಂಚಾಯತಿಯವರನ್ನು ಯಾವ ಕಾಲದಲ್ಲಾದರೂ ಅಧಿಕಾರಗೊಳಿಸಬಹುದು, ತದನಂತರ ಅಂಥ ಪಂಚಾಯತಿಯವರು ಅಂಥ ಕರ್ತವ್ಯವನ್ನು ಚಲಾಯಿಸುವುದು ನ್ಯಾಯವೆನ್ನತಕ್ಕಾಗಿರತಕ್ಕದ್ದು:—

(i) ಪೂರ್ತಿಟುಗಳನ್ನು, ಕಸಾಯಿಟಾಣಿಗಳನ್ನು, ಮತ್ತು ಬಂಡಿ ನಿಲ್ಲುವ ಸ್ಥಳಗಳನ್ನು ಕಟ್ಟೋಣ ಮತ್ತು ಅವುಗಳ ಮೇಲ್ವಿಚಾರ,

(ii) ಸಾರ್ವಜನಿಕ ಉತ್ಸವಗಳ ಒಗ್ಗೆ ಬೇಕಾದ ವಿರೋಗ್ಯರಕ್ಷಣೆಯ ವಿಚಾರಣೆಗಳು;

(iii) ಜಾತ್ರೆಗಳ ಮೇಲ್ವಿಚಾರ,

(iv) ಮೀನು ಹಿಡಿಯುವ ಸ್ಥಳಗಳ ಮೇಲ್ವಿಚಾರ.

(v) ರಸ್ತೆಗಳ ಮೇಲೆ ಮರಗಳನ್ನು ನಡೋಣ ಮತ್ತು ಕಾವಾಡೋಣ;

(vi) ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿ ನಡಿಸಿಕೊಂಡು ಬರೋಣ ಮತ್ತು ಪ್ರಾಥಮಿಕ ವಿದ್ಯಾಪ್ರಾಸಕ್ತಿ ಸುಬಂಧಪಟ್ಟ ಇತರ ವಿಷಯಗಳು;

(vii) ವೈದ್ಯಕೀಯ ನಹಾಯದ ವಿಚಾರ.

ಗ್ರಾಮ ಫಾರ್ಕ್ಟ್ ಯಾಸಿ ಕಾಮಗಳನ್ನು ಪಂಚಾಯತಿಯವರಿಗೆ ಒಪ್ಪಿಸಿಕೊಡೋಣ

17. ಜೀಫ್ ಕಮಿಷನರವರು ತಾವು ನಿರ್ದೇಶಿಸಬಹುದಾದಂಥ ಶರತ್ತುಗಳಿಗೆ ಮತ್ತು ಪಂಚಾಯತಿಯವರಿಂದ ಯಾವ ಸಹಾಯವ್ಯವಸ್ಥೆಯಾಗಿ ತೆರಲ್ಪಡಬೇಕಾಗಿದ್ದರೆ ಅಂಥಾ ಸಹಾಯದವ್ಯವಸ್ಥೆಯು ತೆರಲ್ಪಡುವುದಕ್ಕೆ ಒಳಪಡಿಸಿ ಗ್ರಾಮ ಫಾರ್ಸ್ಟ್ಗಳು ಸೌತಿ -ವ- ಮೀಸ ಬಗ್ಗೆ ಸುರಕ್ಷಿಸಲ್ಪಟ್ಟಿದ್ದರೂ ಇತರ ಉದ್ದೇಶಗಳ ಒಗ್ಗೆ ಏರ್ಪಟ್ಟಿದ್ದರೂ ಸರಿಯೇ, ಅವುಗಳ ಆಡಳಿತೆ, ಸಂರಕ್ಷಣೆ -ವ- ಕಾವಾಡುವಿಕೆಯನ್ನು ಯಾವ ಪಂಚಾಯತಿಯವರಿಗಾಗಲಿ ಒಪ್ಪಿಸಿಕೊಡಬಹುದು.

ನೀರಾವರಿ ಕಾಮಗಾರಿಗಳ ವಿಷಯದಲ್ಲಿ ಕರ್ತವ್ಯಗಳನ್ನು ಒಪ್ಪಿಸಿಕೊಡೋಣ

18. ಜೀಫ್ ಕಮಿಷನರವರು, ತಾವು ನಿರ್ದೇಶಿಸಬಹುದಾದಂಥ ಶರತ್ತುಗಳಿಗೊಳಪಡಿಸಿ, ಯಾವುದೊಂದು ಗ್ರಾಮದ ನೀರಾವರೀ ಕಾಮಗಾರಿಯ ರಕ್ಷಣೆಯನ್ನು -ವ- ಕಾವಾಡುವಿಕೆಯನ್ನು, ನೀರಾವರಿಯ ನೆರವಿಗೆ ಆಡಳಿತೆಯನ್ನು ಅಥವಾ ಯಾವುದೊಂದು ನೀರಾವರೀ ಕಾಯಗಾರಿಯ ಮೇಲೆ ಹೊಂದಿಕೊಂಡಿರುವ ಹೊಲಗಳಿಗೆ ಅದಂಥ ನೀರು ಹಾಯಿಕೊಡಲ್ಪಡುವುದನ್ನು ಕ್ರಮಪಡಿಸುವುದನ್ನು ಯಾವ ಪಂಚಾಯತಿಯವರಿಗಾಗಲಿ ಒಪ್ಪಿಸಿಕೊಡಬಹುದು.

ಪಂಚಾಯತಿಯವರಿಗೆ ಸಹಸ್ಥೆಗಳನ್ನು -ಯೂ- ಕಾಮಗಾರಿಗಳನ್ನು ವರ್ಗಾಯಿಸಬಹುದು

19. ಜೀಫ್ ಕಮಿಷನರಿಂದ ಮೊದಲ್ಪಡಿಸುವಂತಾದಂಥ ಕೃಯಗಳಿಗೊಳಪಟ್ಟು, ಡಿಸ್ಟ್ರಿಕ್ಟ್ ಬೋರ್ಡಿನವರು -ಯೂ- ಕಮಿಷನರವರು -ಯೂ- ಯಾವನೊಬ್ಬ ಖಾಸಗಿ ಮನುಷ್ಯನು -ಯೂ- ಮನುಷ್ಯರ ಕೂಟವು, ಒಂದು ಪಂಚಾಯತಿಯವರ ಸಮ್ಮತಿಯನ್ನು ಪಡೆದು, ಸದರೀ ಪಂಚಾಯತಿಯವರಿಗೆ ಮೇಲ್ವಿಚಾರಣೆಯಲ್ಲಿರುವ ಪ್ರದೇಶದೊಳಗಣ ಯಾವುದೊಂದು ಸಂಸ್ಥೆಯ ಆಡಳಿತೆಯನ್ನು ಅಥವಾ ಯಾವುದೊಂದು ಕಾವಾಗಾರಿಯನ್ನು ನಡಿಸೋಣವನ್ನು -ಯಾ- ನಡೆಸಿಕೊಂಡು ಬರೋಣವನ್ನು ಅಥವಾ ಯಾವುದೊಂದು ಕರ್ತವ್ಯವನ್ನು ನಿರವೇರಿಸುವುದನ್ನು, ಒಪ್ಪಿಕೊಳ್ಳಬಹುದಾದಂಥ ಶರತ್ತುಗಳಿಗೊಳಪಡಿಸಿ, ಅಂಥಾ ಪಂಚಾಯತಿಯವರಿಗೆ ವರ್ಗಾಯಿಸಬಹುದು.

ಪಂಚಾಯತಿಯವರ ಕರ್ತವ್ಯಗಳನ್ನು ಹೆಚ್ಚಿಸಲು ಸರ್ಕಾರಿಂಟನವರ ಅಧಿಕಾರ

20. ಜೀಫ್ ಕಮಿಷನರವರು, ತಾವು ನಿರ್ದೇಶಿಸುವುದಾದಂಥ ಶರತ್ತುಗಳಿಗೊಳಪಡಿಸಿ 15, 16, 17, 18 -ನೇ- 19 ನೇ ಪ್ರಕರಣಗಳಲ್ಲಿ ಸರ್ಕೂದಿಸಿಲ್ಪಟ್ಟಿರುವುಗಳ ವಿನಾ ಇತರ ಯಾವುದಾದರೂ ಕರ್ತವ್ಯಗಳನ್ನು ಚಲಾಯಿಸುವಂತೆ -ಯೂ- ಕೆಲಸಗಳನ್ನು ನೆರವೇಸುವಂತೆ, ಒಂದು ಸಾಮಾನ್ಯ -ಯೂ- ವಿಶೇಷ ಹುಕುಮು ಕೊಡುವ ಮೂಲಕ, ಯಾವ ಪಂಚಾಯತಿಯವರನ್ನಾಗಲಿ ಅಧಿಕಾರಗೊಳಿಸಬಹುದು.

ಕಮಿಟಿಗಳ ನೇಮಕ.

21. (1) ಈ ಆಕ್ಟಿನಿಂದ -ಯೂ- ಅವರ ಜೋರಿಗೆ ಮೂಡೋಡಾದ ಕ್ರಮಗಳಿಂದ ಒಂದು- ಪಂಚಾಯತಿಯವರ ತೀರ್ಮಾನದ, ಬಗ್ಗೆ ಪ್ರತ್ಯೇಕಿಸಿಡಲ್ಪಟ್ಟ ಆಡಳಿತೆಯ ಯಾವುದೊಂದು ನಮೂದಾದ ಶಾಖೆಗೆ ಸಂಬಂಧಪಡುವ ವಿಷಯಗಳನ್ನು ವಿಚಾರಿಸೋಣಲು, ನದರೀ ಪಂಚಾಯತಿಯವರು ಒಪ್ಪಿಸಿಕೊಡೊಡಾದ ಅಧಿಕಾರಗಳಿಂದ ಕೂಡಿದ ಕಮಿಟಿಗಳನ್ನು ತಮ್ಮ ಸೌಂಬರಕೊಳಗಿಂದ ನೇಮಿಸಿಕೊಡುವುದು, ಆದರು ಅಂಥಾ ಯಾವುದಾದರೂ ವಿಷಯಗಳನ್ನು ಕುರಿತು ವಿಚಾರಿಸಿ ರಿಪೋರ್ಟು ಮಾಡುವರೆ ಒಬ್ಬಿಬ್ಬರು ಪಂಚಾಯತದಾರರನ್ನು -ಯೂ- ಪಂಚಾಯತದಾರರ ಕಮಿಟಿಗಳನ್ನು ನೇಮಿಸಬಹುದು

(2) ಪಂಚಾಯತಿದಾರರು ಇದ್ದರೂ ಪಂಚಾಯತಿಯವರ ಅಭಿಪ್ರಾಯದ ಜೋರಿಗೆ ಯಾವುದೊಂದು ಕಮಿಟಿಯಲ್ಲಿ ಕೆಲಸಮಾಡಲು ವಿಶೇಷವಾದ ಯೋಗ್ಯತೆಗಳನ್ನು ಪಡೆದಿರುವ ಯಾವ ಗೃಹಸ್ಥರನ್ನಾಗಲಿ, ಸದರೀ ಪಂಚಾಯತಿಯವರು, ಅಥವ ಮೂಲಕರಾದ ಸುಬ್ಬಯ್ಯ ಅಧ್ವರಾಂಕಕ್ಕ ಕಡಿಮೆಯಿಲ್ಲದಷ್ಟು ಸಂದಿಯಿಂದ ಪ್ರೋತಿಸಿಲ್ಪಟ್ಟ ಬಂದ, ನಿಣ ಯಿಡ ಮೂಲಕ, ತಾವು ಸರಿ ಎನಿಸುವಷ್ಟು ದಾದುಧ ವಾಯಿದೆಯ, ಸರಿಗೆ ಅಂಥಾ ಕಮಿಟಿಯ ಸೌಂಬರಾ ಆಗಿರಲಾಗಿ ನೇಮಕ ಮಾಡುವುದು ನ್ಯಾಯವೆನ್ನುವಷ್ಟಾರಾಗತಕ್ಕದ್ದು. ಪಂಚಾಯತಿದಾರರ ಕರ್ತವ್ಯಗಳಿಗೆ, ಅಧಿಕಾರಗಳಿಗೆ ಮಿಂದೆ ಪ್ರತಿಗಳಿಗೆ ಸಂಬಂಧಪಡಿಸಿದ ಈ ಆಕ್ಟಿನ ಸೆಕ್ಷನ್ನಿನ ನಿಬಂಧನೆಗಳು, ಆಗುಮಾಡುವಟ್ಟಿಗೆ, ಅಂಥ ಮನುಷ್ಯರಿಗೆ ಅಗತ್ಯವಾಗತಕ್ಕದ್ದು.

ಜಂಟಿ ಕಮಿಟಿಗಳು

22 (1) ಪಂಚಾಯತಿಗಳವರು ಅಥವಾ ಪಂಚಾಯತಿಗಳವರು ಮತ್ತು ಇತರ ಸ್ಥಳೀಕ ಅಧಿಕಾರ ಸ್ಥಾನಗಳವರು—

(a) ತಮಗೆ ನನುಷ್ಟಿಯರಿಗೆ ಹಿತಸಂಬಂಧನಿತವಾದ ಯಾವುದೊಂದು ಉದ್ದೇಶದ ಒಗ್ಗೆ ತಮ್ಮ ತಮ್ಮ ಕೂಟಗಳಿಂದಲಿ ಒಂದು ಜಂಟಿ ಕಮಿಟಿಯನ್ನು ನೇಮಿಸಿ ಸಂಪರ್ಕಿಸಲು,

(b) ಯಾವುದೊಂದು ಜಂಟಿ ಕಾಮಗಾರಿಯನ್ನು ಕಟ್ಟುವುದಕ್ಕೆ -ಸಂ ನುಂಬೆ ಕಾಶಾಡಿಕೊಂಡ ಬಂದ ಕುರಿತ- ಅಂಧ ಶ್ರುತಿ ಅಧಿಕಾರವ್ಯಾಪ್ತಿಯವರನ್ನು ಒಪ್ಪಡಿಸಿದ ಶರತ್ತುಗಳನ್ನು ನಿರ್ಪಡಿಸುವ ಅಧಿಕಾರವನ್ನು ಮತ್ತೆ ಅಂಥ ಅಧಿಕಾರ ಸ್ಥಾನಗಳ ವೈಕಿ ಯಾವುದೊಂದು ಅಧಿಕಾರಸ್ಥಾನದಲ್ಲಿರುವ ಜುಲಾಯಿಸಲ್ಪಡುವುದಾದ ಯಾವುದೊಂದು ಅಧಿಕಾರವನ್ನು ಅಂಧ ಕಮಿಟಿಗೆ ಒಪ್ಪಿಸಿಕೊಡುವುದಕ್ಕಲ್ಲಿ, ಮತ್ತು

(c) ಅಂಥ ಕಮಿಟಿಯು ವಿಚಾರಣೆಸ್ಥ ಮತ್ತು ಅದರ ನೌಂಬರರ ಉದ್ಯೋಗದ ಅವಧಿಯನ್ನು ಗೆಕಿತ್ಯಪಡಿಸುವ ಕ್ರಮಗಳನ್ನು ತಿರುಗಿಸುವುದಕ್ಕಲ್ಲಿ -ನ- ಕ್ಯುಲು ಮಾಡುವುದರ ಬಗ್ಗೆ ನಮ್ಮ ಯಾವ ಉದ್ದೇಶದ ಬಗ್ಗೆ, ಸದರೀ ಕಮಿಟಿಯು ನೇಮಕಪಟ್ಟಿರುವುದೋ ಆ ಉದ್ದೇಶದ ಸಂಬಂಧವಾಗಿ ಅಂಧ ಕಮಿಟಿಯ ಪ್ರೊಸೀಡಿಂಗುಗಳನ್ನು ಕ್ರಮಪಡಿಸ ಪುದರಲ್ಲಿ,

(2) ಈ ಪ್ರಕರಣನ ಮೇರೆಗೆ ನರ್ತಿಸಿದ ಸ್ಥಳೀಕ ಅಧಿಕಾರಸ್ಥಾನಗಳವರೊಳಗೆ ಯಾವ ಭಿನ್ನಭಿಪ್ರಾಯವ್ಯಾಯವಾಗಲಿ ನುಟ್ಟಿದರೆ, ಅವು ಜೀಫ್ ಕಮಿಷನರವರ ಬಳಿಗ್ಯೆ ಕಳುಹಿಸಿ ಕೊಡೋಣಾಗತಕ್ಕದ್ದು, ಮತ್ತು ಅವರ ಮೇಲೆ ಅವರು ಕೈಬ್ಟ ತೀರ್ಮಾನವೆ ಕೊನೆಯದಾಗಿರತಕ್ಕದ್ದು.

ತಮ್ಮ ಕರ್ತವ್ಯಗಳನ್ನು ನೆರವೇರಿಸುವರೆ ಪಂಚಾಯತಿಯವರ ಅಧಿಕಾರಗಳು.

23. ಈ ಬಗ್ಗೆ ಜೀಫ್ ಕಮಿಷನರವರು ವರ್ಪಡಿಸಬಹುದಾದಂಥ ಕ್ರಮಗಳಿಗೊಳಪಟ್ಟು ವ ತ್ತು 15, 16, 17, 18, 19 -ನ- 20 ನೇ ಪ್ರಕರಣಗಳ ನಿಬಂಧನೆಗಳಿಗೆ ಧಕ್ಕೆಯಾಗದಂತೆ ಮತ್ತು ಜೀಫ್ ಕಮಿಷನರವರ -ಯೂ- ಡಿಸ್ಟ್ರಿಕ್ಟ್ ಬೋರ್ಡಿನವರ ಯಾವುದೊಂದು ಹುಕುಮಿನಿಂದ ನಿರಾಯಿಸ್ಪೃತಿರುವನ, ತಮ್ಮ ನ್ಯಾಯಧಿಕಾರದೊಳಗಣ ನಮಸ್ತ ರಸ್ತೆಗಳ, ಮೊರಿಗಳ, ಸೇತುವೆಗಳ ಚರಂಡಿಗಳ, ಚರಂಡಿಗಳ ಕಾಮಗಾರಿಗಳ, ಮತ್ತು ಕಾಲುವೆಗಳು -ನ ನೀರಾವರಿಯ ಕಟ್ಟುಕಾಲುವೆಗಳು ಇವುಗಳ ಇತರ ಜಲಸೂರಗಳ ನೋಲಧಿಕಾರವ್ಯಗಳನ್ನಾಗಿರತಕ್ಕದ್ದು, ಮತ್ತು ಅವನ್ನು ಕಾವಾಡಿಕೊಂಡು ಬರುವ -ವ ಮೆರಸ್ಥ ಮಾಡುವ ಬಗ್ಗೆ ಅವಶ್ಯವಾದ ನೆವಸ್ತ ಕೆಲಸಗಳನ್ನು ಅವರು ಮಾಡಿಸಬಹುದು; ಮತ್ತು

(i) ಹೊಸ ರಸ್ತೆಗಳನ್ನು ನಿರ್ಪಡಿಸಲು ಮತ್ತು ಸೂಡಲು ಬಹುದು,

(ii) ಹೊಸ ಸೇತುವೆಗಳನ್ನು -ಯೂ- ಸೊಹರಿಗಳನ್ನು ಕಟ್ಟಬಹುದು

(iii) ಯಾವುದೊಂದು ರಸ್ತೆಯನ್ನಾಗಲಿ ನೇತುವೆಯನ್ನಾಗಲಿ ಅಗಲಪಡಿಸಲು, ತೆರೆಯಲು, -ದೊಡ್ಡದಾಗಿ ಮಾಡಲು -ಯೂ- ಅಸ್ಥಿರ ರೂಪಿಪಡಿಸಲು ಬಹುದು;

(iv) ಚರಂಡಿಗಳನ್ನು ಮತ್ತು ಚೆರಂಡಿಗಳ ಕಾಮಗಾರಿಗಳನ್ನು ಕಟ್ಟಿಬಹುದು;

(v) ಜಲಮೂಗ್‌ಗಳನ್ನು ಅಳವಡಿಸಲು -ಯೂ- ಅಸ್ಥಿರ ರೂಪಿಪಡಿಸಲು ಬಹುದು: ವ ತ್ತು

(vi) ಕಮ್ಮ ಪ್ರದೇಶದೊಳಗಣ ಯಾವುದೊಂದು ರಸ್ತೆಯಲ್ಲಿ -ಯೂ- ಸಾರ್ವಜನಿಕ ಸ್ಥಳದಲ್ಲಿ ದೀಪಗಳನ್ನಿಡಿಸುವ ಬಗ್ಗೆ ವಿರ್ಪಾಡು ಮಾಡಬಹುದು;

(b) ಗ್ರಾಮದ -ಯೂ- ಅದರ ಒಂದು ಭಾಗದ ಆರೋಗ್ಯ ಸ್ಥಿತಿಯನ್ನು ಅಭಿವೃದ್ಧಿಪಡಿಸುವ ಬಗ್ಗೆ, ಒಂದು ಪಂಚಾಯತಿಯವರಿಗೆ—

(i) ಒಂದು ನ್ಯಾಯವಾದ ಕಾಲಬೆಳಗಾಗಿ ಯಾವುದೊಂದು ಕಟ್ಟಡದ ಬಗ್ಗೆ ಬಾಸಣಿ ಚೆರಂಡಿಗಳನ್ನು ಕಟ್ಟಿಸುವಂತೆ ಆದೇಶ ಆದರ ಬಾಸಣಿ ಚರಂಡಿಗಳನ್ನು ತಪ್ಪಲುವಂತೆ ಮಾಡುವಂತೆ -ಯೂ- ತೆಗೆದು ಹಾಕುವಂತೆ ಆದರ ಮಾಲೀಕನನ್ನು -ಯೂ- ಆಸುಭೋಗದಾರನನ್ನು ನೋಟೀಸು ಮೂಲವಾಗಿ ಕೇಳಲು;

(ii) ನ್ಯಾಯವಾದ ವಾಯಿದೆಯನ್ನು ಕೊಟ್ಟು, ನೋಟೀಸು ಮೂಲವಾಗಿ, ಆರೋಗ್ಯಕ್ಕೆ ಹಾನಿಕರವಾದ -ಯೂ- ನೆರೆಹೊರೆಯವರಿಗೆ ಅಸಹ್ಯಕರವಾದ -ಯೂ- ಅಸ್ಥಿರ ಒಂದು ಉಪದ್ಯಕಾರಣವಾದ ಯಾವುದೊಂದು ಜರಂಡಿ, ಕೊಳಕು -ಯೂ- ನಿರಿತರುವ ನೀರನ್ನಳ್ಳಿ -ಯೂ- ಅದು ನೀರಾವುದಕ್ಕೆ ಉಗುಳೋಗಿನಿಸ್ಟಲ್ಪಟ್ಟ ಯಾವುದಾದರೂ ಜಾವಿ, ಹೊಂಡ, ಕಂದಕ, ಗುಣಿ, ಕೊಳ, ಕೆರೆ -ಯೂ- ಇತರ ಸ್ಥಳವಿರುವ -ಯೂ- ಅದಕ್ಕೆ ಲಗತ್ತು ಇರುವ ಯಾವುದೊಂದು ಭೂಮಿಯ -ಯೂ- ಕಟ್ಟಡದ ಜೂಲೀಕನನ್ನು -ಯೂ- ಆಸುಭೋಗದಾರನನ್ನು, ಅವನು ಅದನ್ನು ಮುಚ್ಚಿಸಿಬಿಡುವಂತೆ, ಃ ಜಿಸಬಿಡುವಂತೆ, -ಯೂ- ಆಳ ಪಡಿಸುವಂತೆ -ಯೂ- ಅದರಿಂದ ನೀರನ್ನು ತೆಗೆದು ಸಾಕಿಸುವಂತೆ -ಯೂ ಅದನ್ನು ಬತ್ತಿಸುವಂತೆ -ಯೂ- ಉಪದ್ರವವನ್ನು ಹೋಗಲಾಡಿಸಲು ಆಗತ್ಯವೆನಿಂದು ಸದರೀ ಪಂಚಾಯತಿಯವರಿಂದ ಬರಿಸಲ್ಪಡಬಹುದಾದಂಥ ಇತರ ಕೆಲಸವನ್ನು ಅದರ ಸಂಬಂಧವಾಗಿ ನಡೆಸುವಂತೆ ಕೇಳಲು,

(iii) ನ್ಯಾಯವಾದ ವಾಯಿದೆಯನ್ನು ಕೊಟ್ಟು ನೋಟೀಸು ಮೂಲಕ, ಯಾವ ವಿಧದಲ್ಲಾದರೂ ಆರೋಗ್ಯಕ್ಕೆ ಹಾನಿಕರವಾದ -ಯೂ ಮಹಾ ಜನಗಳಿಗೆ ಆಪಾಯಕರವಾದ -ಯೂ- ನೆರೆಹೊರೆಯವರಿಗೆ ಅಸಹ್ಯಕರವಾದ ಸಸ್ಯಾಬಿಯಿಂದ, ಗಿಗಿಗುಯೆಯಿಂದ, ಜಲಪ್ರಾಪಿಕಳ್ಳಿಯಿಂದ ಅಥವಾ ಕಾಣ ಗಿಗಿಗುಯೆಯಿಂದ, ಜಲಪ್ರಾಪಿಕಳ್ಳಿಯಿಂದ -ಯೂ- ಕಾಡುಗಿ ಪಡಿಸಲ್ಪಡುವ ಯಾವುದೊಂದು ಭೂಮಿ -ಸ- ಕೆಸ್ಸನ್ನು -ಯೂ- ಆಸುಭೋಗದಾರನನ್ನು, ಸದರಿ ಸಸ್ಯಾಬಿಯನ್ನು, ಗಿಗಿಗುಯೆಯನ್ನು, ಜಲಪ್ರಾಪಿಕಳ್ಳಿಯನ್ನು -ಯೂ- ಕಾಡುಗಿ ಪಡಿಸಲ್ಪಡುವಂತೆ ಕೇಳಲು,

(iv) ರಚಿಸಬೇಕಾದ ಯಾವುದೊಂದು ಭೂಮಿಯ -ಯೂ- ಕಟ್ಟಡದ ಮೂಲೀಕನು -ಯೂ- ಆಸುಭೋಗದಾರನು ಒಂದು ನ್ಯಾಯವಾದ ಕಾಲಬೆಳಗೆ ಅದನ್ನು ಕುಡಿಪಡಿಸೋಕೆಂದು -ಯೂ- ಅದಕ್ಕೆ ಸುಣ್ಣ ಬಳಿಸೋಕೆಂದು ಆಕನನ್ನು ಕೇಳಲು,

(v) ಸದರೀ ಪಂಚಾಯತಿಯವರಿಂದ ಕೊಡಲ್ಪಟ್ಟ ಒಂದು ಲೈಸೆನ್ಸಿನ ಮೇರೆಗೆ ವಿನಾ, ನೊರಜು, ಮಣ್ಣು -ಯೂ- ಮೂಳಿನ ಬಗ್ಗೆ ಆಗೆಯುವುದನ್ನು -ಯೂ- ಕಲ್ಲೆಚ್ಚುವುದನ್ನು ನಿಷೇಧಿಸಲು, ಅಧಿಕಾರವಿರತಕ್ಕದ್ದು.

(c) 18ನೇ ಪ್ರಕರಣದ (vii) ನೇ ಕ್ಲಾಜಿನ್ನ ನಮೂದಿಸಲ್ಪಟ್ಟ ವಿಷಯಗಳ ಕುರಿತು, ಒಂದು ಪಂಚಾಯತಿಯವರು ಸಾರ್ವಜನಿಕ ಮತ್ತು ಖಾಸಗಿ ಉದ್ದೇಶಗಳ ಒಗ್ಗೆ ಯೋಗ್ಯವಾದ ಗುಣ್ಯ ಸಾಕಾದ ನೀರು ನರಬರಾಯನ್ನು ಗ್ರಾಮಾಯಕ್ಕೆ ಒದಗಿಸಿಬಹುದು, ಮತ್ತು ಅಂಥಾ ಉದ್ದೇಶಗಳಿಗಾಗಿ ಅವರಿಗೆ—

(i) ಕೆರೆಗಳನ್ನು -ಯೂ- ಜಾವಿಗಳನ್ನು ಕಟ್ಟಿಲು, ದುರಸ್ತಿ ಮಾಡಲು -ನ- ಕಾಪಾಡಿಕೊಂಡು ಬರಲು ಮತ್ತು ಅಳ್ಳಗಳ ನ್ನು -ಯೂ- ಜಲ ಸೂರ್ಗಗಳನ್ನು ನಿರ್ಮಲಗೊಳಿಸಲು,

(ii) ಯಾವುದೊಂದು ಕೆರೆ, ಜಾವಿ, ತೃಳ್ಳ -ಯೂ- ಜಲ ಸೂರ್ಗವನ್ನು ಕೊಂಡುಕೊಳ್ಳಲು -ಯೂ- ಗೇಣಿಯ -ಯೂ- ತಾಣಕೆಯ ಮೂಲವಾಗಿ ನಂಪಾದಿಸಲು ಮತ್ತು ಮೂಲೀಕನ ನಮ್ಮತಿಯನ್ನು ಪಡೆದು ಅದನ್ನು ಶುಚಿಪಡಿಸಲು -ಯೂ- ದುರಸ್ತಿಪಡಿಸಲು - ಯೂ - ಅದರಿಂದ ನೀರನ್ನು ಪಡೆಯುವ ಬಗ್ಗೆ ಬೇಕಾದ ಸೌಕರ್ಯಗಳನ್ನು ನರ್ಪಡಿಸಲು,

(iii) ಸಾರ್ವಜನಿಕ ಯೋಗಕ್ಷೇಮದ ಕಾಲದಲ್ಲಿ, ಪಾನನೂಪಯೆ - ಯೂ - ಆವಿಗೆಯ ಉದ್ದೇಶಗಳಿಗೆ, ಅಥವಾ ಬಟ್ಟೆಗಳನ್ನು ಜಿಗಿಯುವುದಕ್ಕೆ ಯಾವುದೊಂದು ನೀರಿನನ್ನೂ ಒಳ್ಳೆ ಉಪಯೋಗಿನಿಸ್ಪಡುವುದನ್ನು ನಿಷೇಧಿನಲು,

iv ಪಾನನೂಡುವ -ಯೂ- ಆವಿಗೆಯ ಉದ್ದೇಶಗಳಿಗೆ ಯಾವುದಾದರೂ ಸಾರ್ವಜನಿಕ ನೀರಿನ ಮೂಲವು ಪ್ರತ್ಯೇಕಿಸಿಡಲ್ಪಟ್ಟಿರುವುದನ್ನು ಕುರಿತು ಚಾಮರುಮಾಡಲ್ಪುವುದು ಮತ್ತು ನಿರ್ವಹಿಸಿರಿ ಸ್ಥಾನಮಾಡೋಣವನ್ನು, ಬಟ್ಟೆಗಳು -ವ- ಪ್ರಾಣಿಗಳು ತೊಳೆಯಲ್ಪಡುವುದನ್ನು -ಯೂ- ಹಾಗೆಪ್ರತ್ಯೇಕಿಸಿಡಲ್ಪಟ್ಟ ನೀರಿನ ಮೂಲದಲ್ಲಿ ಪ್ರಾಯಿಕವಾಗಿ ತೆಯಿಸಿವ ಇತರ ಕೈ

ತ್ಯಗಳನ್ನು ಆದೇರೀತಿಯಲ್ಲಿ ನಿರ್ವಹಿಸಲು,
ಅಧಿಕಾರವಿರತಕ್ಕದ್ದು:

ಪರಂತು ನೀರಾವರಿಯಬಗ್ಗೆ ಏರ್ಪಟ್ಟ ಒಂದು ಕಾಲಿನಿಯ -ಯೂ- ಕಟ್ಟುಕಾಲಿನೆಯ ಮೇಲಧಿಕಾರಿಯಿರುವ ಅಧಿಕಾರಸ್ಥ ನ ಸಮ್ಮತಿಯನ್ನು ಮುಂಚಿತವಾಗಿ ಪಡಕೊಳ್ಳದೇನೇ ಅಂಥ ಕಾಲಿನೆಗಳಲ್ಲಿ ಕಟ್ಟು ಕಾಲಿನೆಗಳಾಗಲಿ ಸಂಬಂಧಪಟ್ಟ ಜಮೀನುದಾರರೂ ಕೆಲಸವನ್ನು ಈ ಕ್ಲಾಜಿನೆಯರೀತಿಗೆ ಮೊಡತಕ್ಕುದ್ದಲ್ಲ.

(2) (1) ನೇ ಒಳಪ್ರಕರಣದ (c) ಕ್ಲಾಜಿನೆ (iii) ನೇ ಯೂ (iv) ನೇ ಒಳಕ್ಲಾಜಿನೆ ಮೇರೆಗೆ ಕೊಡಲ್ಪಟ್ಟ ಒಂದು ಹುಕುಮನ್ನು ಯಾವ ಮನುಷ್ಯನಾಗಲಿ ಉಲ್ಲಂಘಿಸಿದರೆ, ಆತನು ಒಟ್ಟು ಮೇಜಿಸ್ಟ್ರೇಟನ ಮುಂದೆ ತಪ್ಪು ಸಾಬೀತುಪಟ್ಟ ಲ್ಲಿ. ಇಪ್ಪತ್ತೈದು ರೂಪಾಯಿಗೆ ವ್ಯಾಪಿಸಿಬಹುದಾದ ಜುಲು ಮಿನೆಯಿಂದ ಶಿಕ್ಷಿಸಲ್ಪಡತಕ್ಕದ್ದು.

(3) (1)ನೇ ಒಳಪ್ರಕರಣದ(b) ಕ್ಲಾಜಿನೆ (i) ರಿಂದ(iv) ರ ವರೆಗಿನ ಒಳಕ್ಲಾಜುಗಳ ಮೇರೆಗಿನ ನೋಟಿಸುಮೂಲಕ ಕೇಳೋಕಾದ ಯಾವ್ರದೊಂದು ಕಾಮಗಾರಿಯು ಸದರೀ ನೋಟಿಸಲ್ಲಿ ನಮೂದಿಸಲ್ಪಟ್ಟ ಕಾಲದೊಳಗೆ ಸಡಿಸಲ್ಪದದಿದ್ದರೆ, ಪಂಚಾಯತಿಯವರು ತಾವೇ ಅಂಥ ಕಾಮಗಾರಿಯನ್ನು ನಡಿಸುವ ಹಾಗೆ ನೂಡಬಹುದು ಮತ್ತು ಅಂಥ ಕಾಮಗಾರಿಯ ಖರ್ಚನ್ನು -ಯಾ- ಅದರ ಅಂಶವನ್ನು, ಅದು ಭೂಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ, ಸದರೀ ಒಳಕ್ಲಾಜುಗಳಲ್ಲಿ ಸೂಚಿಸಲ್ಪಟ್ಟ ಮೂಲೀಕನಿಂದ -ಯೂ- ಅನುಭೋಗದಾರನಿಂದ ಬರವೂಡಿಕೊಳ್ಳಬಹುದು.

ಪ್ರವೇಶಿಸುವ ಅಧಿಕಾರವು.

24. ಒಂದು ಪಂಚಾಯತಿಯ ಯಾವನೊಬ್ಬ ಮೆಂಬರನು, ಅಧ್ಯಕ್ಷರನು -ಯೂ- ನೌಕರನು 23 ನೇ ಪ್ರಕರಣದ ಉದ್ದೇಶಗಳ ಬಗ್ಗೆ -ಯೂ- ಅದಕ್ಕನುಸಾರವಾಗಿ ಯಾವುದೊಂದು ಸಂದರ್ಶನವನ್ನು ಮಾಡುವ -ಯೂ- ಕಾಮಗಾರಿಯನ್ನು ನಡಿಸುವಬಗ್ಗೆ ಸಹಾಯಕರ -ಯೂ- ಕೆಲಸಗಾರರ ಸಮೇತ ಯಾ- ಅವರು ಇಲ್ಲದೇನೆ ಯಾವ್ರದಾದರೂ ಕಟ್ಟಡವನ್ನು -ಯೂ- ಭೂಮಿಯನ್ನು -ಯೂ- ಅದರ ಮೇಲೆ ಪ್ರವೇಶಿಸಬಹುದು.

ಪರಂತು.—

(a) ಸೂರ್ಯಸ್ತಮಯದನಂತರ ಮತ್ತು ಸೂರ್ಯೋದಯಕ್ಕೆ ಮುಂಚೆ ಹಾಗೆ ಪ್ರವೇಶಮಾಡುತಕ್ಕದ್ದಲ್ಲ.

(b) ಯಾವ್ರದೊಂದು ನಿವಾಸದ ಮನೆಯನ್ನು ಅದರ ಅನುಭೋಗದಾರನ ಸಮ್ಮತಿ ಪಡೆದು ಪ್ರವೇಶಿಸಿದ್ದರೇನೇ ವಿನಾ ಹಾಗೆ ಪ್ರವೇಶಮಾಡುವ ಇರಾದೆಯನ್ನು ಕುರಿತು ಪ್ರೆಸಿಡೆಂಟನಿಂದಾಗಲಿ ಈ ಬಗ್ಗೆ ಅವನಿಂದ ಕ್ರಮವಾಗಿ ಅಧಿಕಾರ ಗೊಳಿಸಲ್ಪಟ್ಟ ಬ್ಬ ಮನುಷ್ಯನಿಂದಾಗಲಿ ದಸ್ತುತು ಮಾಡಲ್ಪಟ್ಟ ನೋಟಿಸನ್ನು ನ್ಯಾಯವಾದನ್ನು ಮುಂಚಿತವಾಗಿ ಕೊಡದೆ ಹಾಗೆ ಪ್ರವೇಶಿಸತಕ್ಕುದ್ದಲ್ಲ; ಮತ್ತು

(c) ಹಾಗೆ ಪ್ರವೇಶಿಸುವಲ್ಲಿ ಪ್ರವೇಶಿಸಲ್ಪಟ್ಟ ನಿವೇಶನಗಳಲ್ಲಿ ವಸಿಸುವವರ ಸಾಮಾಜಿಕ -ನ- ಮತಸಂಬಂಧವಾದ ಸದ್ದತಿಗಳಿಗೆ ತಕ್ಕ ಗನುಸನವನ್ನು ಕೊಡತಕ್ಕದ್ದು

ಪಂಚಾಯತಿಯವರು ತಮ್ಮ ಒಳಾನಾಸುಗಳನ್ನು ಏರ್ಪಡಿಸಲು ಮತ್ತು ರಮ್ಮ ಸ್ವಬಂಧಿಯನ್ನು ಸೇರಿಸಲು ತಕ್ಕದ್ದು

25. ಚೀಫ್ ಕಮಿಷನರನರು ಈ ಕುರಿತು ಏರ್ಪಡಿಸಬಹುದಾದಂಥ ಕ್ರಮಗಳಿಗೆಳಪಟ್ಟು ಪಂಚಾಯತಿಯವರು—

(a) ತಮ್ಮ ಕೆಲಸದ ನಡವಳಿಕೆಯ ಬಗ್ಗೆ ಮತ್ತು ಸಾಮಾನ್ಯವಾಗಿ ಈ ಅಕ್ಟಿನ ಉದ್ದೇಶಗಳನ್ನು ನೆರವೇರಿಸುವ ಬಗ್ಗೆ ಒಳಖಾನಾಸುಗಳನ್ನು ಏರ್ಪಡಿಸಬಹುದು, ಮತ್ತು

(b) ತಾವು ಅಗತ್ಯವೆಂದು ಯೋಚಿಸುವುದಾದಂಥ ಆ ಫೀಸರರ -ನ- ನೌಕರರ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಮತ್ತು ಅಂಥ ಸಿಬ್ಬಂದಿಗೆ ಪಾವತಿಯೊಗಬೇಕಾದ ಸಂಬಳಗಳನ್ನು -ಯೂ- ಇತರ ಪ್ರತಿಫಲವನ್ನು ಗೊತ್ತುಪಡಿಸಲು ಬಹುದು.

4 ನೇ ಅಧ್ಯಾಯ.

ಪಂಚಾಯತಿಯ ಫಂಡು.

ಪಂಚಾಯತಿಯವರು ಹೊಂದಬಹುದಾದ ತೆರಿಗೆಗಳು -ನ- ರುಸುಮುಗಳು (ಫೀಸು)

26. (1) ಚೀಫ್ ಕಮಿಷನರವರ ಮಂಜೂರಾತಿಗೊಳಪಟ್ಟು, ಒಂದು ಪಂಚಾಯತಿಯವರು ಈ ಕೆಳಗಣ ಯಾವತ್ತು -ಯೂ- ಯಾವ್ರದಾದರೂ ತೆರಿಗೆಗಳನ್ನು ಮತ್ತು ಫೀಸನ್ನು ಹೊರಿಸಬಹುದು:—

(a) ಗ್ರಾಮದೊಳಗಿರುವ ಕಟ್ಟಡಗಳ ಬಂಡವಾಳದ ಮೌಲ್ಯದ ಮೇಲೆ ಒಂದು ವಾರ್ಷಿಕ ತೆರಿಗೆ;

(b) ಗ್ರಾಮದೊಳಗೆ ಜರಾಯಿನ್ನುಡವ್ವ A ಪೆಡ್ಯೂಲಿನಲ್ಲಿ ನಮೂದಿಸಲ್ಪಟ್ಟಂಥ ಕಸುಬುಗಳ, ವ್ಯಾಪಾರಗಳ -ವ- ವೃತ್ತಿಗಳ ಮೇಲೆ ಒಂದು ವಾರ್ಷಿಕ ತೆರಿಗೆ;

(c) ಬಾನುವಾರುಗಳುಳ್ಳುವ ಸ್ಥಳಗಳನ್ನು, ಕಣಗಳನ್ನು, ಗ್ರಾಮನತ್ಯಗಳನ್ನು ಮತ್ತು ತತ್ಸಮಾನವಾದ ಇತರ ಸಾರ್ವಜನಿಕ ಸ್ಥಳಗಳನ್ನು -ಯೂ- ಸಾರ್ವಜನಿಕ ಸ್ಥಳಗಳನ್ನು -ಯೂ- ಅವುಗಳ ಭಾಗಗಳನ್ನು ಉಪಯೋಗಿಸುವ ಬಗ್ಗೆ ಫೀಸು;

(d) ಪಂಚಾಯತಿಯವರ ಮೇಲಧಿಕಾರದ ಕೆಳಗಿರುವ ಅಂಡಿನಿಲ್ಲುವ ಸ್ಥಳಗಳನ್ನು, ಮಾರ್ಕೆಟುಗಳನ್ನು, ಮಾರ್ಕೆಟು ಬಾಗಗಳನ್ನು ಮತ್ತು ಬಸಾಯಿಖಾನೆಗಳನ್ನು ಉಪಯೋಗಿಸುವ ಬಗ್ಗೆ ಫೀಸು;

(e) ಪಂಚಾಯತಿಯವರ ಮೇಲಧಿಕಾರದ ಕೆಳಗಿರುವ ಧರ್ಮಶಾಲೆಗಳನ್ನು, ಛತ್ರಗಳನ್ನು, ಪ್ರಯೂಣಿಕರ ವಿಶ್ರಾಂತಿಯ ಮನೆಗಳನ್ನು -ನ- ತತ್ಸಮಾನವಾದ ಇತರ ಸಾರ್ವಜನಿಕ ಕಟ್ಟಡಗಳನ್ನು ಉಪಯೋಗಿಸುವುಕ್ಕೆ, ಖಾಸಗಿ ವಾಸಿಗೆ ಇರತಕ್ಕ ಕೋಣೆಗಳನ್ನು ಮತ್ತು ಇತರ ಸೌಕರ್ಯಗಳನ್ನು ಒದಗಿಸುವುದಕ್ಕೆ ಫೀಸು;

(f) ಜರಾವಿನಗೋಸ್ಕರ ಅಥವಾ ನೌಕೆಯನ್ನಾಗಲಿ ಇತರ ಕಾಡು ಉತ್ಪತ್ತಿಯನ್ನಾಗಲಿ ಒಯ್ಯುವಬಗ್ಗೆ ಗೋಸ್ಕರ ಪರ್ಮಿಟ್ ಯಾನೆ ರಹದಾರಿಗಳನ್ನು ಕೊಡುವ ಬಗ್ಗೆ ಫೀಸು;

(g) ಈ ಮೇಲಿನ ತೆರಿಗೆಗಳ ಮ ಫೀಸುಗಳ ಜೊತೆಗೆ ಪೆಚ್ಚಿಗೆಯಾಗಿ -ಯೂ- ಅವುಗಳ ಬದಲಾಗಿ, ಒಂದು ಪಂಚಾಯತಿಯವರು, ಗ್ರಾಮನುಕೂಟಕ್ಕೆ ಅನುಕೂಲವಾಗಿಯೂ ಯೋಗ್ಯವಾಗಿಯೂ ಇರುವುದೆಂದು ತಾವು ಭಾವಿಸಬಹುದಾದ ಇತರ ಯಾವ್ರದಾದರೂ ತೆರಿಗೆಯ -ಯೂ- ಫೀಸಿನ ಬಗ್ಗೆ ಸೆಲಹೆಗಳನ್ನು ಚೀಫ್ ಕಮಿಷನರವರ ಮಂಜೂರಾತಿಯ ಬಗ್ಗೆ ಕಳುಹಿಸಿಕೊಡಬಹುದು, ಮತ್ತು ಅವರು ಅವನ್ನು ಅಂಗೀಕರಿಸಿ, ಸದರೀ ಗ್ರಾಮದಲ್ಲಿ ಅಡನ್ನು ಹೊರಿಸುವುದನ್ನು ಮುಂಜೂರುಮಾಡಬಹುದು:

ಪರಂತು ಪೆಡ್ಯೂಲಾದ ಯಾನ ಸಟ್ಟಿಯಲ್ಲಿ ಸೇರಿಸಲ್ಪಟ್ಟ ತೆರಿಗೆಗಳಿಗೆ ಸಂಬಂಧಪಟ್ಟ ಕ್ರಮಗಳ 2ನೇ ಪಣ್ಯೂಲಿನಲ್ಲಿ ಸೇರದ ಒಂದು ತೆರಿಗೆಯನ್ನು ಹೊರಿಸೋಣಕ್ಕೆ, ಆಲೋಚನಾ ಸಭೆಯೊಳಗಣ ಗವರ್ನರ್-ಜನರಲ್‌ರವರು ಮಂಜೂರಾತಿಯನ್ನು ಮುಂಚಿತವಾಗಿ ಪಡೆದಿದ್ದರೇನೆ ಹೊರತು, ಚೀಫ್ ಕಮಿಶನರನರು ಮಂಜೂರಾತಿಯನ್ನು ಕೊಡತಕ್ಕುದಲ್ಲ.

(3) ಈ ಪ್ರಕರಣದ ಳೀರೆಗೆ ಹೊರಿಸಲ್ಪಡಬಹುದಾದ ಎಲ್ಲಾ ತೆರಿಗೆಗಳನ್ನೂ ಫೀಸುಗಳನ್ನೂ ನಿರ್ದೇಶಿಸಲ್ಪಡಬಹುದಾದ ದಿಂಥ ಕ್ರಮಗಳಗನುಸಾರವಾಗಿ ಹೊರಿಸತಕ್ಕದ್ದು.

ಪಂಚಾಯತಿಯವರ ನಿರ್ಣಯವಿಲ್ಲದ ತೆರಿಗೆಯನ್ನಾಗಲಿ ಫೀಸನ್ನಾಗಲಿ ಹೊರಿಸಕೂಡದು.

27 26ನೇ ಪ್ರಕರಣದಮೇರೆಗೆ ಹೊರಿಸಲ್ಪಡುವ ಯಾವ ತೆರಿಗೆಯಾಗಲಿ ಫೀಸಾಗಲಿ, ಅದನ್ನು ಹೊರಿಸುವ್ರದು ಆ ಉದ್ದೇಶದಬಗ್ಗೆ ವಿಶೇಷವಾಗಿ ಕರೆಯಲ್ಪಟ್ಟ ಒಂದು ವಿಟಿಂಗಿನಲ್ಲಿ ಪಂಚಾಯತಿದಾರರ ಮಂಜೂರಾತಿ ಸಂಖ್ಯೆಯ ಪೈಕಿ ಅರ್ಧಕ್ಕಿಂತ ಕಡಿವೆ-ಯಲ್ಲದನರಿಂದ ಪೋಷಿಸಲ್ಪಟ್ಟ ಪಂಚಾಯತಿಯವರ ಒಂದು ನಿರ್ಣಯದಿಂದ ಮಂಜೂರುಮಾಡಲ್ಪಟ್ಟಲ್ಲದೇನೆ ವಿನಾ ಹೊರಿಸಲ್ಪಡತಕ್ಕದ್ದಲ್ಲ.

ತೆರಿಗೆಗಳನ್ನು -ವ- ಫೀಸುಗಳನ್ನು ಹೊರಿಸುವ ಕುರಿತು ಪ್ರಕಟನೆ

28. ಪಂಚಾಯತಿಯವರು, ಚೀಫ್ ಕಮಿಷನರನರ ಮಂಜೂರಾತಿಯಿಂದ ಯಾವ್ರದೊಂದು ತೆರಿಗೆ -ಯೂ- ಫೀಸು ಹೊರಿಸೋಣವನ್ನು ಮಂಜೂರು ಮಾಡಿಸಾಗಿ ಆಂಥ ಪಂಚಾಯತಿಯವರು ಯಾವ ದರದಲ್ಲಿ ವ-ತ್ತು ಯಾವ ತಾರೀಖಿನಿಂದ ಸದರೀ ತೆರಿಗೆಯು -ಯೂ- ಫೀಸು ಹೊರಿಸಲ್ಪಡಬೇಕಾಗಿದೆಯೆಂದು ಬುದನ್ನು ಸದರೀ ತೆರಿಗೆಯು -ಯೂ- ಫೀಸು ಯಾವ ಗ್ರಾಮಗಳಲ್ಲಿ ಹೊರಿಸಲ್ಪಡಬೇಕಾಗಿದೆಯೋ ಆ ಗ್ರಾಮಗಳಲ್ಲಿ ನಿರ್ದೇಶಿಸಲ್ಪಟ್ಟ ರೀತಿಯಲ್ಲಿ ಕೂಡಲೇ ಬಾಹಿರ, ಪೂಡಿಕತಕ್ಕದ್ದು.

ತೆರಿಗೆಗಳನ್ನು -ವ- ಫೀಸುಗಳನ್ನು ನಿರ್ಣಯಿಸೋಣ

29. 26ನೇ ಪ್ರಕರಣದಲ್ಲಿ ಸೂಚಿಸಲ್ಪಟ್ಟ ತೆರಿಗೆಗಳನ್ನಾಗಲಿ ಫೀಸುಗಳನ್ನಾಗಲಿ ನಿರ್ಣಯಿಸುವಲ್ಲಿ, ಪಂಚಾಯತಿಯವರು 28 ನೇ ಪ್ರಕರಣದಮೇರೆಗೆ ಕೊಟ್ಟ ಇನ್ನಿಹಾರನ್ನು ನಮೂದಿಸಲ್ಪಟ್ಟ ದರಗಳಲ್ಲಿ -ಯೂ- ಮೊಜಗುಗಳಲ್ಲಿ ಮತ್ತು ಆ ತಾರೀಕುಗಳಿಂದ ಆವ ಪಾವತಿಯಾಗಬೇಕೆಂದು ನಿರ್ಣಯಿಸತಕ್ಕದ್ದು.

ತೆರಿಗೆಯನ್ನು ಪುನರ್ನಿರ್ಣಯಿಸುವ ಬಗ್ಗೆ ಮನವಿ ಕೊಡೋಣ

30. 29 ನೇ ಪ್ರಕರಣದ ಮೇರೆಗೆ ತೆರಿಗೆ ನಿರ್ಣಯಿಸೋಣದಿಂದ ಅಸಮಧಾನ ಹೊಂದಿದ ಯಾವ ಮನುಷ್ಯನಾಗಲಿ ಸದರೀ ತೆರಿಗೆಯನ್ನು ಪುನರ್ವಿಮರ್ಶಿಸುವ ಬಗ್ಗೆ ನಿರ್ದೇಶಿಸಲ್ಪಡಬಹುದಾದಂಥ ಕಾಲದೊಳಗಾಗಿ ಪಂಚಾಯತಿಯವರ ಬಳಿಗೆ ಬಾಯಿ ಮಾತಿನ ಮೂಲವಾಗಿ ಆಗಲಿ ಬರಹ ಮೂಲವಾಗಿ ಆಗಲಿ ಮನವಿಮಾಡಬಹುದು; ಮತ್ತು ಪಂಚಾಯತಿಯವರು ಅದನ್ನು ತಿದ್ದುಪಡಿಮಾಡಲು -ಯೂ- ಕಾರಮಂ ಮಾಡಲು ಬಹುದು.

ತೆರಿಗೆಗಳ -ವ- ಫೀಸುಗಳ ವಸೂಲಿ

31. (1) ತೆರಿಗೆಗಳ -ವ- ಫೀಸುಗಳ ಮೊಬಲಗುಗಳು ನಿರ್ದೇಶಿಸಲ್ಪಡಬಹುದಾದಂಥ ರೀತಿಯಲ್ಲಿ ತೆರಿಲ್ಪಡಿಸತಕ್ಕದ್ದು, ಮತ್ತು ಹಾಗೆ ಪಾವತಿಯಾಗದೆ ತಪ್ಪಿದ ಸಂಗತಿಯಲ್ಲಿ ಗ್ರಾಮ ಮುಟ್ಟುಸ್ಥನು ಜಾತಿಬಾಧನ ಜವಸ್ತ್ರತ್ವನ್ನು ನಿರ್ದೇಶಿಸಲ್ಪಟ್ಟ ರೀತಿಯಲ್ಲಿ ಜಪ್ತಿಮಾಡಿ ವಿಕ್ರಯಿಸುವುದರ ಮೂಲಕ ಆ ವನ್ನು, ದಂಡನೆಯ ರೂಪವಾಗಿ ಅಂಥಾ ಜಾತಿಯ ಮೊಬಲಗಿನ ವಜಿಲ್ಲಿ ಒಂದಂಶಕ್ಕೆ ಸಮವಾದ ಒಂದು ಸೊತ್ತದ ಸವೇತ, ಬರೂಡಿಕೊಳ್ಳಿತಕ್ಕದ್ದು.

(2) ಪಂಚಾಯತಿಯವರು 26ನೇ ಪ್ರಕರಣದ (1)ನೇ ಒಳಪ್ರಕರಣದ (c), (d) ವ (f) ಕ್ಲಾಜುಗಳಲ್ಲಿ ಸೂಚಿಸಲ್ಪಟ್ಟ ಫೀಸುಗಳ ಮೊಲಿಯನ್ನು ಒಮ್ಮೊಮ್ಮೆ ಮೂಡು ವರ್ಷಗಳಿಗೆ ಮಿಂದದೆ ವಾಯಿದೆಯಬಗೆ ತಮಗೆ ಯುಕ್ತವೆಂದು ತೋರುವಂಥ ತರತುಗಳಮೇಲೆ ಗುತ್ತಿಗೆಗೆ ಕೊಡಬಹುದು.

ಪಂಚಾಯತಿ ಫಂಡು ಮತ್ತು ಅದರ ವಿನಿಯೋಗ

32 (1) 31ನೇ ಪ್ರಕರಣದಮೇರೆಗೆ ಸಡೆಯೋಗಾದ ಸವಿಸ್ತೃ ಪೊಬಲಗುಗಳು, ಈ ಅಕ್ಟಿನಮೇರೆಗೆ ದಂಡನೆಗಳ, ಬಿಲ್ಲು ಮೊನೆಗಳ, ಫೀಸುಗಳ-ಯೂ-ಖಾಜೀಗಳೋಸಾದಿಯಲ್ಲಿ ವಸೂಲಿಯಾಗಿ ಸಮಸ್ತ ಮೊಬಲಗುಗಳು, ಮತ್ತು ಒಟ್ಟು ಖಾಸಗಿ ಮನುಷ್ಯರಿಂದ -ಯೂ- ಮನುಷ್ಯರಕೂಟದಿಂದ ಕೊಡಲ್ಪಟ್ಟ ಯಾವ್ರದಾದರೂ ವಂತಿಗೆಯ ಸಮೇತವಾಗಿ ಪಂಚಾಯತಿಯವರ ಇತರ ಸಮಸ್ಥ ವಮೆಗಳು ಮತ್ತು ಡಿಸ್ಟ್ರಿಕ್ಟ್ ಬೋರ್ಡಿನವರಿಂದಾಗಲಿ ಗವರ್ನಮೆಂಟಿನವರಿಂದಾಗಲಿ ಕೂಡಲ್ಪಟ್ಟ ಯಾವ್ರದಾದರೂ ಸಹಾಯದ್ರವ್ಯವು ಪಂಚಾಯತಿ ಫಂಡು ಎಂಬಿದಾಗಿ ಕರೆಯಲ್ಪಡತಕ್ಕ ಒಂದು ಫಂಡಿಗೆ ತೆರಲ್ಪಡತಕ್ಕದ್ದು, ಮತ್ತು ಅದರ ಲೆಕ್ಕಗಳು ನಿರ್ದೇಶಿಸಲ್ಪಟ್ಟ ರೀತಿಯಲ್ಲಿ ಇಡಲ್ಪಡತಕ್ಕದ್ದು.

(2) ಈ ಅಕ್ಟಿನ ಉದ್ದೇಶಗಳನ್ನು ನೆರವೇರಿಸುವ್ರದಲ್ಲಿ ಪಂಚಾಯತಿಯವರಿಗೆ ತಗುಲಿದ ಖರ್ಚುಗಳು ಪಂಚಾಯತಿ ಫಂಡಿನೊಳಗಿಂದ ತೆರಲ್ಪಡತಕ್ಕದ್ದು:

ಪರಂತು ಯಾವ ನಮೂದಾದ ಉದ್ದೇಶದಬಗ್ಗಾಗಲಿ ಒಂದು ಪಂಚಾಯತಿಯವರಿಗೆ ಸರಫಾಲೆ ಮೂಡಲ್ಪಟ್ಟ -ಯೂ- ಆ ವರಿಂದ ಸಡೆಯೋಗಾದ ಸಮಸ್ತ ಮೊಬಲಗುಗಳು ಆ ಉದ್ದೇಶಕ್ಕೆ ಮಾತ್ರವೇ ವಿನಿಯೋಗಿಸಲ್ಪಡತಕ್ಕದ್ದು.

5 ನೇ ಅಧ್ಯಾಯ.

ಮೇಲಧಿಕಾರ.

ಪಂಚಾಯತಿಯವರ ಪ್ರೊಸೀಡಿಂಗ್ಸನ್ನು ಅವೂರಸು ಪಡಿಸೋಣ -ಯೂ- ರದ್ದುಮಾಡೋಣ.

33. ಚೀಫ್ ಕಮಿಶನರವರು, ಒಂದು ಪಂಚಾಯತಿಯವರ ಯಾವ್ರದಾದರೂ ನಿರ್ಣಯವನ್ನು, ಅಥವಾ ಒಂದು ಪಂಚಾಯತಿಯವರಿಂದಾಗಲಿ ಅದರ ಪ್ರೆಸಿಡಿಂಟ್‌ನಿಂದಾಗಲಿ ಕೊಡಲ್ಪಟ್ಟ ಯಾವ್ರದಾದರೂ ಹುಕುಮು -ಯೂ- ನೋಟಿಸು ಅಥವಾ ಆ ಅಕ್ಟಿನಮೇರೆಗೆ -ಯೂ- ಆ ಅಕ್ಟ್ಯಪ್ರಕಾರ ಅಧಿಕಾರ ವಿರುವ ಬೆಯುದಾಗಿ ತೋರಿಸಿಕೊಂಡು ಮೂಡಲ್ಪಡಲಿಕ್ಕಿರುವ ಯಾ ಮೂಡಲ್ಪಡುತ್ತಿರುವ ಯಾವ್ರದಾದರೂ ಕೆಲಸವು ಮೊಂದ ಸಾಭಾನದ್ದಾಗಿದೆಯೆಂದು ಅಥವಾ ಅಂಥಾ ನಿರ್ಣಯವನ್ನಾಗಲಿ, ಹುಕುಮನ್ನಾಗಲಿ, ನೋಟಿಸನ್ನಾಗಲಿ, ಕೆಲಸವನ್ನಾಗಲಿ ಜಾಯಿಸೋಣದಿಂದ ನ್ಯಾಯಸಮ್ಮತವಾಗಿ ಕೆಲಸಕ್ಕಿದಕಾಯವಾನಾದರೂ ಮನುಷ್ಯನಿಗೆ ಆತಂಕ, ಹಾನಿ-ಯೂ-ಅಪಾಯವು ಅಥವಾ ಜನರ ಜೀವಕ್ಕಾಗಲಿ, ಆರೋಗ್ಯಕ್ಕಾಗಲಿ, ಭದ್ರತೆಗಾಗಲೇ ಅಪಾಯವು ಉಂಟಾಗುವ ಸಂಭವುದೆಯೆಂದು, ಅಥವಾ ಒಂದುದೊಂಬಿಗಾಗಲಿ, ಕಲಹಕ್ಕಾಗಲಿ ಕಾರಣವಾಗಬಹುದೆ ಸಂಭವುದೆಯೆಂದು ಅಭಿಪ್ರಾಯ ಪಟ್ಟಲ್ಲೇ ಆದರೆ, ಆ ನಿರ್ಣಯ ಹುಕುಮು ನೋಟಿಸು ಅಥವಾ ಕೆಲಸವನ್ನು ಜಾರಿಗೆ ಬರಹೊಲವಾದ ಹುಕುಮು ಕೊಟ್ಟು, ಅಂಥಾ ನಿರ್ಣಯದ ಹುಕುಮಿನ -ಯೂ- ನೋಟಿಸಿನ ಜಲಾಶಯವನ್ನು ಆಗಲಿ ಸಡಿಸಲು ಅಥವಾ ಅಂಥ ನಿರ್ಣಯವನ್ನು, ಹುಕುಮನ್ನು -ಯೂ- ನೋಟಿಸನ್ನು ರದ್ದುಪಡಿಸಲು ಬಹುದು, ಬದ್ಧು ಅಥವಾ ಕೆಲಸವು ಮೂಡಲ್ಪಡುವ್ರದನ್ನು ನಿರ್ದೇಶಿಸಬಹುದು.

ಪಂಚಾಯತಿಯವರ ರಿಕಾರ್ಡುಗಳ, ಕಾಮಗಾರಿಗಳ-ಯೂ ಸ್ಥಳತನಿಖೆ ಮಾಡೋಣ.

34. ಒಂದು ಪಂಚಾಯತಿಯವರು, ಈ ಕುರಿತು ಚೀಫ್ ಕಮಿಶನರನರು ಅಧಿಕಾರಗೊಳಿಸಬಹುದಾದ ಯಾವನೊಬ್ಬ ಆಫೀಸರನಿಗೆ-ಯೂ-ಇತರ ಮನುಷ್ಯನಿಗೆ ತಮ್ಮ ಸಮಸ್ತ ಪುಸ್ತಕಗಳನ್ನೂ, ಪ್ರೊಸೀಡಿಂಗುಗಳನ್ನೂ ರಿಕಾರ್ಡುಗಳನ್ನೂ ನೋಡಲು ಮತ್ತು ಪಂಚಾಯತಿಯವರ ಆಸುಭೋಗದಲ್ಲಿರುವ ಯಾವ್ರದಾದರೂ ಸ್ಥಿರ ಸ್ವತ್ತನ್ನು ಅಥವಾ ಅವರ ಹುಕುಮಿನ ಬೆಗೆ ಮುಂದುವರಿಯುತ್ತಿರುವ ಯಾವ್ರದಾದರೂ ಕಾಮಗಾರಿಯನ್ನು ಅಥವಾ ಅವರು ಮೇಲಧಿಕಾರ ನಡೆಸುವ ಯಾವ್ರದಾದರೂ ಸಂಸ್ಥಾಪನೆಯನ್ನು ಸ್ಥಳತನಿಖೆ ಮಾಡಿಸಿ ಸಂದರ್ಶಿಸಲು ಎಲ್ಲ ಕಾಲಗಳಲ್ಲಿಯೂ ಅನುಮತಿಕೊಡತಕ್ಕದ್ದು.

ಪಂಚಾಯತಿಯನ್ನು ರದ್ದು ಪಡಿಸುವರೆಗೆ ಗವರ್ನಮೆಂಟಿನವರ ಅಧಿಕಾರವು.

35. ಒಂದು ಪಂಚಾಯತಿಯವರು ಈ ಅಕ್ಟಿನಿಂದ-ಯೂ-ಆತರ ಯಾವ್ರದಾದರೂ ಅಕ್ಟಿನಿಂದ-ಯೂ-ಅದರಮೇರೆಗೆ ಅವರ ಮೇಲೆ ಹೊರಿಸಲ್ಪಟ್ಟ ಕರ್ತವ್ಯಗಳನ್ನು ನೆರವೇರಿಸಲಿಕ್ಕೆ ಪಸೆ ಪದೇ ತಪ್ಪುತ್ತಾರೆಂದು -ಯೂ- ಅವರ ಅಧಿಕಾರಗಳನ್ನು ಮರ್ಯಾದೆಯೋಗಪಡಿಸುತ್ತಾರೆಂದು ಚೀಫ್ ಕಮಿಶನರವರು ಅಭಿಪ್ರಾಯ ಪಟ್ಟಲ್ಲೇ ಆದರೆ, ಅವರು, ವಿರೋಧವಾಗಿ ಕಾರಣವನ್ನು ತೋರಿಸಲು ಸದರಿ ಪಂಚಾಯತಿಯವರಿಗೆ ಸಾಕಾಶ ಅವಕಾಶವನ್ನು ಕೊಟ್ಟನಂತರ, ಬರಹ ಮೂಲವಾದ ಹುಕುಮನ್ನು ಕೊಟ್ಟು, ಹಾಗೆ ಮಾಡುವುಕ್ಕೆ ತಮ್ಮ ಕಾರಣಗಳನ್ನು ನಮೂದಿಸಿ, ಸದರಿ ಪಂಚಾಯತಿಯನ್ನು ರದ್ದುಪಡಿಸಬಹುದು.

ರದ್ದುಪಡಿಸೋಣದರ ಫಲಿತಾಂಶಗಳು.

36. 35ನೇ ಪ್ರಕರಣದ ಮೇರೆಗೆ ಒಂದು ಪಂಚಾಯತಿಯು ರದ್ದುಪಡಿಸೋಣವಾದಲ್ಲಿ, ಸದರಿ ಪಂಚಾಯತಿಯ ಸಮಸ್ತ ಮೆಂಬರುಗಳು, ಸದರಿ ಹುಕುಮಿನ ಕುರಿತ ಸ್ಪಷ್ಟೀಕರಣದ ತಾರೀಕಿನಿಂದ, ಅಂಥ ಮೆಂಬರುಗಳಾಗಿರುವ ಅವರ ಉದ್ಯೋಗಗಳನ್ನು ಖಾಲಿ ಮಾಡತಕ್ಕದ್ದು, ಮತ್ತು ಚೀಫ್ ಕಮಿಷನರವರು ಸದರಿ ಪಂಚಾಯತಿಯ ಫಂಡುಗಳ ಮತ್ತು ಇತರ ಸ್ವತ್ತಿನ ವಿವರದಲ್ಲಿ ನೀತಿ ಸಮ್ಮತವೆಂದೂ ನ್ಯಾಯವೆಂದೂ

ತಾವು ಭಾವಿಸುವಂಥ ಹುಳುಮುಗಳನ್ನು ಕೊಡತಕ್ಕದ್ದು ಮತ್ತು ಅಂಥ ಹುಳುಮುಂಗಳು ಕೊನೆಯುವಾಗಿರತಕ್ಕದ್ದು.

ರಿಜಿಸ್ಟ್ರಾರನ ಸೇವೆಗಳ, ಆತನ ಕರ್ತವ್ಯಗಳು ಮತ್ತು ಗವರ್ನ ಮೆಂಟಿನವರು ಅಧಿಕಾರಗಳನ್ನು ಆತನಿಗೆ ಒಪ್ಪಿಸಿಕೊಡೋಣ

37. (1) ಚೀಫ್ ಕಮಿಷನರರವರು ಪಂಚಾಯತಿಗಳ ದಿನ ಸ್ಪ್ರತಿನಾಗಿರುವಂತೆ ಒಬ್ಬ ಮನುಷ್ಯನನ್ನು ನೇಮಿಸಬಹುದು ಮತ್ತು ತನಗೆ ಯುಕ್ತವೆಂದು ತೋರುವಂಥಾ ಸಂಬಳವನ್ನೂ ಸಿಬ್ಬಂದಿಯನ್ನೂ ಆತನಿಗೆ ಆಗಿಂದಾಗ ಗೊತ್ತು ಪಡಿಸಿಬಹುದು.

(2) ಅಂಥಾ ಆಫೀಸರನ ಮತ್ತು ಆತನ ಸಿಬ್ಬಂದಿಯು ಬಿರ್ಜ ಸ್ಥಳೀಕ ಗವರ್ನ್‌ಮೆಂಟಿನವರ ರಿವಿನ್ಯೂಗಳಿಗಿಂದ ತೆರಲ್ಪಡತಕ್ಕದ್ದು.

(3) ಹಾಗೆ ನೇಮಕವಾದರಂಜಿನ್ಸ್ಟ್ರಾರನು ಆತನ ನ್ಯಾಯ ಧಿಕಾರದೊಳಗಿನ ಪಂಚಾಯತಿಗಳ ನಿರ್ವಾಹಕ್ಕಾಗಿ ನಿಗಕೊಡಲು ಮತ್ತು ಅವುಗಳ ಆಡಳಿತೆಯ ಮೇಲ್ವಿಚಾರನನ್ನು ನಡಸಲು ತಕ್ಕದ್ದು ಮತ್ತು ಇನ್ನಿಹಾರು ಯೋಗ್ಯವಾಗಿ ಚೀಫ್ ಕಮಿಷನರರವರಿಂದ ಹಾಗೆ ಅಧಿಕಾರಗೊಳಿಸಲ್ಪಟ್ಟಲ್ಲಿ ಆತನು, 44ನೇ ಪ್ರಕರಣದಮೇರೆಗೆ ಕೈಗುಗಳನ್ನು ಏರ್ಪಡಿಸುವ ಅಧಿಕಾರದ ವಿನಾ, ಈ ಆಕ್ಟಿನಿಂದ ಅಗಲ್ಪಟ್ಟ ಸಿವಿಸ್ಪನಾದ ಯಾವತ್ತಿ ಯಾ ಯಾವುವಾದರೂ ಅಧಿಕಾಗಳನ್ನು ಚಲಾಯಿಸತಕ್ಕದ್ದಲ್ಲ.

ಗವರ್ನ್‌ಮೆಂಟಿನವರ ಅಧಿಕಾರಗಳನ್ನು ಇನ್ನಾರಿಗೆ ಒಪ್ಪಿಸಿಕೊಡೋಣ

38. ಚೀಫ್ ಕಮಿಷನರನು, 37ನೇ ಪ್ರಕರಣದ (3)ನೇ ಒಳಪ್ರಕರಣದ ಮೇರೆಗೆ ಒಬ್ಬ ರಿಜಿಸ್ಟ್ರಾರನ, ಜಿಲ್ಲಾಯಿಸಿ ಮಂತೆ ಅಧಿಕಾರಗೊಳಿಸಲ್ಪಡಬಹುದಾದ ಚೀಫ್ ಕಮಿಷನರರ ಯಾವತ್ತು-ಯಾ-ಯಾವುವಾವತರ ಅಧಿಕಾರಗಳನ್ನು ಯಾವು ದೊಂದು ಸ್ಥಳೀಕ ಪ್ರದೇಶದೊಳಗೆ ಆ ಪ್ರದೇಶದಲ್ಲಿರುವ ಯಾ ವುದಾದರೂ ಪಂಚಾಯತಿಯ ಯಾ ಯಾವುದಾದರೂ ತರಗತಿ ಯ ಪಂಚಾಯತಿಗಳ-ಯಾ-ನಮಿಸ್ಸ ಪಂಚಾಯತಿಗಳ ಸಂಬಂ ಧನಾಗಿ ಚಲಾಯಿಸ ಸಂತೆ ಮೆಸರು ಮಾಡಿಸಾಗಿ ಆಗಲಿ ಈ ದ್ಯೋಗ ಪ್ರಯುಕ್ತವಾಗಿ ಆಗಲಿ ಕೂಡಿಸಸಾನ್ನು, ಚೀಫ್ ಕಾರಿಸ್ಟ್ ಆಫೀಸರನ್ನು, ಡಿಸ್ಟ್ರಿಕ್ಟ್‌ಮೋರ್ಡ್ ಪ್ಲಿಸೆಂಟಿನ ನ್ನು ಅಧವಾ ಇತರ ಯಾವನೊಬ್ಬ ಮನುಷ್ಯನ್ನು ಅತನು, ಗವರ್ನ್‌ಮೆಂಟಿನ ಸಂಬಳ ವಡೆಯುವ ಆಫೀಸರನಾಗಿರ್ದರೂ ಇಲ್ಲದಿದ್ದರೂ ಸರಿಯೇ, ಇನ್ನಿಹಾರು ಕೊಡುವ ಮೂಲಕ, ಆ ಧಿಕಾರಗೊಳಿಸಬಹುದು.

ಒಬ್ಬ ಒಪ್ಪಿಸಿ ಕೊಡೋಣಾದ ಅಧಿಕಾರಗಳನ್ನು ಹಿಂತೆಗ ಕೊಳ್ಳೋಣ ಯಾ ಕಟ್ಟಿಲು ವಿಶೇಷ

39. ಚೀಫ್ ಕಮಿಷನರರು, 37ನೇ ಪ್ರಕರಣದ (3)ನೇ ಒಳ ಪ್ರಕರಣದ ಮೇರೆಗಾಗಲಿ 38ನೇ ಪ್ರಕರಣದ ಮೇರೆಗಾಗಲಿ ಯಾವನೊಬ್ಬ ಮನುಷ್ಯನಿಗೆ ತಾವು ಕೊಟ್ಟಿರ ಒಪ್ಪಿಸಿ ಯಾವನೊಬ್ಬ ಮನುಷ್ಯನಿಗೆ ಇನ್ನಿಹಾರು ಮೂಲಕ ಆ ಧಿಕಾರವನ್ನಾಗಲಿ ಇನ್ನಿಹಾರು ಮೂಲಕ ರದ್ದು ಮಾಡಲು - ಯಾ - ತಬ್ಬಲುಗೊಡಲು ಬಹುದು.

6ನೇ ಅಧ್ಯಾಯ.

ವ್ಯಾಜ್ಯಗಳು, ಪ್ರಾಸಿಕ್ಯೂಷನ್ ಯಾನೆ ಫಿರ್ಯಾದು ಸ್ವಯಹರಣೆಗಳು, ಕೈಗುಗಳು, ಇತ್ಯಾದಿ.

ಸ್ವತ್ತನ್ನು ನಷ್ಟ, ದುರ್ವ್ಯಯ - ಯಾ ದುರ್ವಿನಿಯೋಗ ಪಡಿಸಿದ ಬಗ್ಗೆ ಮೊಬಲಗು ವಸೂಲತ

40. (1) ವಿರೋಧವಾಗಿ ಕಾರಣವನ್ನು ತೋರಿಸುವ ಬಗ್ಗೆ ಸಾಕಾದ ಅವಕಾಶವನ್ನು ಸಂಬಂಧಪಟ್ಟ ಪಂಚಾಯತದಾರರು ಗೆ ಕೊಟ್ಟನಂತರ, ಒಂದು ಪಂಚಾಯತಿಯವಗೆ ಸೇರಿದ - ಯಾ - ಅವರಲ್ಲಿ ನಿನಿಷ್ಟವಾದ ಯಾವುದಾದರೂ ಹಣದ - ಯಾ - ಇತರ ಸ್ವತ್ತಿನ ನಷ್ಟ, ದುರ್ವ್ಯಯ - ಯಾ - ದುರ್ವಿನಿಯೋಗವು ಅತನ ದುರ್ನಡತೆಯ - ಯಾ - ಮಹತ್ಕಾದ ಅಸಡ್ಡೆಯ ನೇರವಾದ ಫಲಿತಾಂಶವಾಗಿದೆಯೆಂದ. ಚೀಫ್ ಕಮಿಷನರರು ಸಮಾಧಾನ ಪಟ್ಟುಕಟ್ಟಲ್ಲಿ, ಅವರ - ಬರಹಮುಖಾಲವಾದ ಹುಕುಮು ಕೊಟ್ಟು, ಅಂಥಾ ನಷ್ಟ, ದುರ್ವ್ಯಯ - ಯಾ - ದುರ್ವಿನಿಯೋಗದ ಬಗ್ಗೆ ಅಂಥ ಪಂಚಾಯತಿಯವರಿಗೆ ನಷ್ಟ ಧೃತಿಪಡಿಸಲು ಬೇಕಾದ ಮೊಬಲಗನ್ನು ಗೊತ್ತು ಪಡಿಸಿದೋಣಾದ ತಾತೀತಿಗೆ ಮುಂಜೆ ಅವರಿಗೆ ತೆರಬೇಕಾಗಿ ಅಂಥಾ ಪಂಚಾಯತಿದಾರನಿಗೆ ಆಜ್ಞಾಪಿಸಬಹುದು.

(2) ಸದರ ಮೊಬಲಗು ಹಾಗೆ ತೆರಲ್ಪಡದಿದ್ದ ಪಕ್ಷದಲ್ಲಿ, ನಿವಿಷನರವರು ಅದನ್ನು ಒಂದು ಭೂಕರದಾಯನ ಬಾಕಿ ಯಂತೆ ಬರಮಾಡಿಕೊಂಡು ಅವನ್ನು ಪಂಚಾಯತಿ ಪಂಡಿಗೆ ಎಮೆ ಕಟ್ಟತಕ್ಕದ್ದು

(3) (1)ನೇ ಒಳ ಪ್ರಕರಣದ ಮೇರೆಗೆ ಒಬ್ಬ ಪಂಚಾ ಯತದಾರನೆ ಬದ್ಧತೆಯ ಕುರಿತು ಮತ್ತು ಅವನಿಂದ ಬರವಾಡಿ ಸಿಕ್ಕಲೇಕಾದ ಮೊಬಲಿಗನ ಕುರಿತು ಚೀಫ್ ಕಮಿಷನರರು ಕೊಟ್ಟ ತೀರ್ಮಾನವು ಕೊನೆಯದಾಗಿರತಕ್ಕದ್ದು.

ಪಂಚಾಯತಿಯ - ಯಾ - ಆವ ಮಂಬರನ ಸ್ವತ್ತಿನ - ಯಾ - ಮುತಾಲಿಕನ ಮೇಲೆ ವ್ಯಾಜ್ಯಗಳನ್ನು ಹೂಡೋಣ

41. (a) ಯಾವ ವ್ಯಾಜ್ಯವಾಗಲಿ ಇತರ ನ್ಯಾಯಸಿಬಾ ನವಾದ ವ್ಯವಹರಣೆಯನಿಗೆ ಈ ಆಕ್ಟಿನ - ಯಾ - ಅವರ ಮೇ ರಿಗೆ ಮಾಡೋಣಾದ ಯಾವುದೊಂದು ಕೈಗುದ - ಯಾ ಒಳ ಣಾನಿನ ಮೇರೆಗೆ ಸ್ವಾಧೀಣಾಕ್ಷತೆಯಿಂದ ಮಾಡೋಣಾದ ಮೊವುದೊಂದರ ಬಗ್ಗಾಗಿ, ಒಂದು ಪಂಚಾಯತಿಯವರ ಅಸ್ತ ಯಿಯ ಮೇರೆಗೆ ವರ್ತಿಸುವ ಅವರ ಯಾವನಾದರೂ ಮೆಂಬರನ ವಿರುದ್ಧವಾಗಿ ಅಲ್ಲದೆ ಪಂಚಾಯತಿಯವರ ವಿರುದ್ಧವಾಗಿ ಅಲ್ಲದೆ ಸದರ ಪಂಚಾಯತಿಯವರ ಮೇಲಾಗಲಿ ಅವರ ಆಫೀಸರನ ನವ್ಯಕರನ - ಯಾ - ಮುತಾಲಿಕನ ಮೇಲಾಗಲಿ ಈ ಆಕ್ಟಿನ ಮೇರೆಗೆ ಮಾಡೋಣಾದ ಯಾವುದೊಂದರ ಬಗ್ಗೆ ಯಾವ್ಯಕ್ತಿಯಾದರೂ ಯಾವುದೊಂದರ ವಿರುದ್ಧವಾಗಿ ಯಾ - ಇತರ ನ್ಯಾಯ ಸಂಬಂಧಾದ ವ್ಯವಹರಣೆಯ, ಆ ಕುರಿತ ಒರಪನುಂಬಲಾದ ದ ನೋಟಿಸು ಸದರ ಪಂಚಾಯತಿಯವನ ಆಫೀಸಿನಲ್ಲಿಯೂ ಸದರೀ ವ್ಯಾಜ್ಯವು ಯಾವ ನುಸುಷ್ಯನ ಮೇಲೆ ತರಲ್ಪಡಲು ಇರಾದಿಸಶಾಗಿದೆಯೋ ಆ ಮನುಷ್ಯನು ಸದರೀ ಪಂಚಾಯ ತಿಯವರ ಅಸ್ತಿಯ ಮೇರೆಗೆ ವರ್ತಿಸುವ ಬ್ಬ ನೌಬರನು, ಆಫೀಸರನು, ನವ್ಯಕರನು - ಯಾ - ಮುತಾಲಿಕನು ಆಗಿದ್ದರೆ, ಅಂಥಾ ಮನುಷ್ಯನ ವಾಸಸ್ಥಳದಲ್ಲಿಯೂ ಬಿಡಲ್ಪಟ್ಟ - ಯಾ - ಕೊಡಲ್ಪಟ್ಟ ತರುವಾಯ ಮೂರು ತಿಂಗಳು ದಾಟುವ ವರೆಗೂ ತರಲ್ಪಡಕೂಡದು. ಸದರೀ ನೋಟಿಸಿನಲ್ಲಿ ವ್ಯಾಜ್ಯದ ಕಾರ ಣವು ಅಪೇಕ್ಷಿಸಲ್ಪಟ್ಟ ಪರಿಹಾರದ ಸ್ವರೂಪವು, ಕೇಳೋಣಾದ ಪರಿಹಾರದ್ರವ್ಯದ ಮೊಬಲಗು ಮತ್ತು ಸದರೀ ವ್ಯಾಜ್ಯವ ನ್ನು ತರಲು ಉದ್ದೇಶಿಸಿದ ನುಸುಷ್ಯನ ಹೆಸರು ಮತ್ತು ನಿವಾ ಸವನ್ನೆಲ್ಲ ಸಮುಂಜಸವಿಲ್ಲವೆಂಬ ಪ್ರತಿತಕ್ಕದ್ದಲ್ಲ. ಮತ್ತು ಅಂಥ ನೋಟಿಸು ಕೊಟ್ಟಿರುವಿದನ್ನು ರುಜು ಗಿಡಿದೇನೆ ವಿನಾ ಕೋರ್ಟಿ ನವರು ಪ್ರತಿವಾದಿಗೆ ಅರ್ಜಿಕಂಬಂಧ ತೀರ್ಪು ಕೊಡತಕ್ಕದ್ದಲ್ಲ.

(b) ಅಂಥ ಪ್ರತಿ ವ್ಯಾಜ್ಯವು, ವ್ಯಾಜ್ಯದ ಕಾರಣವು ಪುಟ್ಟಿದನಂತರ ಅರು ತಿಂಗಳೊಳಗೆ ಅಲ್ಲದೆ ಇವೇಲೆ ಸ್ಥಾರಂಭಸಲ್ಪಡತಕ್ಕದಲ್ಲ.

(d) (b) ಕ್ಲಾಜು ಮೇರೆಗೆ ಒಂದು ನೋಟಿನು ಕೊಡಲ್ಪಟ್ಟ ಮೊವ ಪಂಚಾಯತಿಯವರಾಗಲಿ ಮನುಷ್ಯನಾಗಲಿ, ಒಂದು ವ್ಯಾಜ್ಯವು ತರಲ್ಪಡುವುದಕ್ಕೆ ಮುಂಜೆ, ವಾಜಿಗೆ ಸಾ ಕಾದ ಸಾಮಾನವನ್ನು ಆಫೀಸು ಹಾಗೆ ಆಫೀಸಿದ ಮೊಬಲಗ ನ್ನು ಕೋರ್ಟಿನಲ್ಲಿ ತೆತ್ತಿಸಕ್ಕದ್ದಲ್ಲಿ, ಅಧವಾಮಿಯು ಹಾಗೆ ಆ ಫೀಸೋಣಾದ ಮೊಬಲಗಿನಂತೆ ಹೆತ್ತಾಗಿ ಒರತೆಯಿಲ್ಲದೆ ತ ಕ್ಕದ್ದು. ಸದರೀ ವಾಜಿಯು ಹಾಗೆ ಆಫೀಸೋಣಾದಸಂತೆ ರ ಪ್ರತಿವಾದಿಗೆ ತಕ್ಕಲಿದ ಸಮಸ್ಕೆ ವೆಚ್ಚಗಳನ್ನು ತೆರತಕ್ಕದ್ದು.

ಪಂಚಾಯತಿಯವನು, ಯಾ ಆತನ ಮುತಾಲಿಕನ ಆಸ್ತಿಯ ಮುಟ್ಟಾಳೆಗೆ ಸಂಬಂಧ

42 ಈ ಆಕ್ಟಿನ ನಿಬಂಧನೆಗಳ ಮೇರೆಗೆ ತನ್ನ ಕರ್ತವ್ಯಗಳ ನ್ನು ನೆರವೇರಿಸುವುದರಲ್ಲಿ ಒಂದು ಪಂಚಾಯತಿಯನ್ನಾಗಲಿ ಅ ದರ ಯಾವನೊಬ್ಬ ನೌಂಬರನ್ನಾಗಲಿ ಅಧವಾ ಅದರಿಂದ ಯಾ ಅವನಿಂದ ನೇಮಕಪಟ್ಟ ಯಾವ ಮನುಷ್ಯನ್ನಾಗಲಿ, ಅಧವಾ ಸದರೀ ಪಂಚಾಯತಿಯ - ಯಾ - ಬೌಂಬರನ ಯಾವನೊಬ್ಬ ಮನುಷ್ಯನಿಗೆ ಕರಾರುಮೂಡಿಕೊಂಡಿದ್ದವನಿಂ ದ ಮನುಷ್ಯನನ್ನಾಗಲಿ ಯಾವನಾದರೂ ಆತಂಕಪಿಸಿದರೆ ಅಧವಾ ತೊಂದರ ಪಡಿಸಿದರೆ, ಅಧವಾ ಈ ಆಕ್ಟಿನ ಪ್ರಯುಕ್ಕವಾಗಿ ಆ ನೆಸು ಮಾಡುವಂತೆ ಅಧಿಕಾರಗೊಳಿಸಲ್ಪಟ್ಟ - ಯಾ - ವಿಶೇಷಲ್ಪಟ್ಟ ಯಾವ ಕೆಲಸವನ್ನಾಗಲಿ ನಡೆಸುವಂತೆ ಯಾವನೊಬ್ಬ ಮನು ಷ್ಯನನ್ನು ಯಾವಾತನು ಅಡ್ಡಿಪಡಿಸಿದರೆ ಅಧವಾ ಪಡಿಸಲು ಯತ್ನಿಸಿದರೆ, ಅಧವಾ ಯಾವಾತನು ಈ ಆಕ್ಟಿನಿಂದ ಅ ಧಿಕಾರಗೊಳಿಸಲ್ಪಟ್ಟ ಯಾವ ಕಾಮಗಾರಿಯನ್ನಾಗಲಿ ನಡೆಸು ವುದಕ್ಕೆ ಸಂಬಂಧಪಟ್ಟ ಯಾವುದಾದರೂ ಪಟ್ಟವನ್ನು -ಯಾ- ವಿಕ್ಕನ್ನು ಸೂಚಿಸುವ ಉದ್ದೇಶವಾಗಿ ಇಡಲ್ಪಟ್ಟ ಯಾವ ಗು ರುತಿನ್ನಾಗಲಿ ತೆಗೆದು ಪಾತಿದರೆ, ಅಧವಾ ಯಾವಾತನು ಪಂ ಚಾಯತಿಯವರಿಂದ -ಯಾ- ಅವರ ಅಧಿಕಾರದ ಮೇರೆಗೆ ಹುಟ್ಟಿಲ್ಪಟ್ಟ - ಯಾ - ಪ್ರದರ್ಶನಕ್ಕಟ್ಟಲ್ಪಟ್ಟ ಯಾವ ನೋಟಿನ್ನಾಗಲಿ ತೆಗೆದ ಪಾತಿದರೆ, ನಾಶಪಡಿಸಿದರೆ, ವಿರೂಪಪಡಿಸಿದರ -ಯಾ- ಅನ್ಯಥಾ ಅಸ್ಪಷ್ಟವಾಗುವಂತೆ ಕೆಡಿಸಿದರೆ, ಅಕನು ಒಬ್ಬ ಮೇಜಿಸ್ಟ್ರೇಟನ ಮುಂದೆ ಕಮ್ಮನಾಬೇಕುಟ್ಟಲ್ಪಟ್ಟ 50 ರೂಪಾ ಯಿಗೆ ಮೀರದೆ ಒಂದು ಒಂಡಿಗೂಡನಾಗೆ ಗುರಿಯಾಗತಕ್ಕದ್ದು.

ಜಾತಿಗಳ ವರ್ಗಯು ಬಗ್ಗೆ ವ್ಯಾಜ್ಯ.

43. (1) ಇದರಲ್ಲಿ ಆತಗಿನ ನಂಧಾಕ್ಕೆ ಯಾವುದೂ ಈ ಆಕ್ಟಿನ ಮೇರೆಗೆ ಸ್ಥಾಪಿಸಲ್ಪಡಲಾದ ಯಾವ ಪೊಲೀಸಿಗಾಗಿ ಬಗ್ಗಾ ಗಲಿ ಪಂಚಾಯತಿಯನೆಂದಿ ಹುದು ವಾಜ್ಯವು ಹೂಡಲ್ಪಡುವುದನ್ನು ತಡೆಸತಕ್ಕದಲ್ಲ

ತಂಗೆಗಳು ಇತ್ಯಾದಿಯ ಕುರಿತು ದೋಷಾರೋಪಣೆ ಕೂಡದು

(2) ಈ ಆಕ್ಟಿನಿಂದ ಕೂಡಲ್ಪಟ್ಟ ಅಧಿಕಾರದ ಮೇಗೆ ನೊಡೋಣಾದ ಯಾವುದೊಂದು ತಪ್ಪಿನ ನಿರ್ಣಯವು ಯಾ ತ ಗಾಯೆಯು ಮತ್ತು ಹೊರಿಸಲ್ಪಟ್ಟ ಯಾವುದೆಂದು ಪೊಲೀಸರು, ಪಟವಾದಾರರೂ ಮನುಷ್ಯನೆಸನ, ವಾಸಸ್ಥಾನದ ಯಾ- ಉ ದ್ಯೋಗದ, ಯಾವುದೊಂದು ಸ್ವತ್ತಿನ -ಯಾ- ವಶಾಧೀನ ವಾ ರಣೆಯ ಅಧವಾ ತೆರಿಗೆ ಹೊರಿಸಲ್ಪಟ್ಟ, ತೆಗಾದ ಮೂಡಲ್ಪಟ್ಟ -ಯಾ ಹೊರಿಸಲ್ಪಟ್ಟ ಪೊಲಿಸಿಗ ವಿಷಯದಲ್ಲಿ ಯಾವುದಾದರೂ ಕೈತಪ್ಪು -ಯಾ- ಯಾವುದಾದರೂ ದೋಷವು ಇರುವಿದಾ ರಣದಿಂದ ದೋಷಾರೋಪಿಸಲ್ಪಡಲು -ಯಾ- ಬಾಧಕ ಹೊಂದ ಲು ಕೂಡದು ಪರಂತು ಈ ಆಕ್ಟಿನ ನಿಬಂಧನೆಗಳು ಮುಟ್ಟಾಂ ಶದಲ್ಲಿಯೂ ಅನುಸರಿಸಲ್ಪಟ್ಟಿರತಕ್ಕದ್ದು. ಮತ್ತು ಈ ಆಕ್ಟ ಮೇರೆಗೆ ಯಾವ ವೈಚಾರಣೆಗಳಾಗಿರಲಿ ಸಮುಂಸಯಲ್ಲಿ ಕಂಂ ದು ಇರುವದೆಂಬ ಕಾರಣದಿಂದ ಮೊತ್ತಿನ ಯಾವುದೊಂದು ನ್ಯಾಯನ್ಯಾಸದಲ್ಲಿ ರದ್ದುಪಡಿಸಲ್ಪಡಲು -ಯಾ-ತಕ್ಕ ಪಾತಲ್ಲು ಡಲು ಕೂಡದು.

(3) ಈ ಆಕ್ಟಿನಿಂದ ಕೊಡಲ್ಪಟ್ಟ ಅಧಿಕಾರ ಮೇರೆಗೆ ವಸೂಲು ಮಾಡೋಣಾದ ಯಾವ ಮೊಬಲಗನ್ನಾಗಲಿ ತಾಪ ಸು ಪಾತಕೆಳುವ ಬಗ್ಗೆ ಅಧವಾ ಸದರೀ ಅಧಿಕಾರದ ಮೇರೆ ಗೆ ಮಾಡೋಣಾದ ಯಾವುದಾದರೂ ತೆರಿಗೆ ನಿರ್ಣಯದ ಯಾ ಹೊಡದ ವಸೂಲಿನ ವಿಷಯದಲ್ಲಿ ಉಂಟಾದ ನಷ್ಟಗಳನ್ನು ಬ ರಿಸಲು ಆಜ್ಞಾಪಿಸಲ್ಪಡಲಾದ ಯಾವ ಮೊಬಲಗನ್ನಾಗಲಿ ಅಧವಾ ಸದರೀ ಪಂಚಾಯತಿಯವರಿಂದ ಯಾ ಅವರ ಪರವಾಗಿ ಯಾವ ವ್ಯಾಜ್ಯವಾಗಲಿ ಯಾವ ಕೋ ರ್ಟಿನಲ್ಲಿಯೂ ತರಲ್ಪಡತಕ್ಕದ್ದಲ್ಲ, ಪರಂತು ಈ ಆಕ್ಟಿನ ನಿಬಂ ಧನೆಗಳು ಮುಟ್ಟಾಂಶದಲ್ಲಿಯೂ ಫಲಿತಾಂಶದಲ್ಲಿಯೂ ಅನುಸ ರಿಸಲ್ಪಟ್ಟಿರತಕ್ಕದ್ದು.

ಕೈಗುಗಳನ್ನು ಏರ್ಪಡಿಸುವಲ್ಲಿ ಸ್ಥಳೀಕ ಗವರ್ನ್‌ಮೆಂಟಿನವರ ಅಧಿಕಾರವು.

44 (1) ಚೀಫ್ ಕಮಿಷನರವರು ಈ ಆಕ್ಟಿನ ಯಾವ ತ್ತು ಯಾ-ಯಾವುದಾದರೂ ಉದ್ದೇಶಗಳನ್ನು ನೆರವೇರಿಸುವಲ್ಲಿ ಅವಕ್ಕೆ ವಿಶೇಷವಾಗಿರುವಂತೆ ಕೈಗುಗಳನ್ನು ಏರ್ಪಡಿಸಬಹುದು.

(2) ಮುಖ್ಯವಾಗಿ ಮತ್ತು ಮೇಲಿನ ಅಧಿಕಾರದ ಸಾ ನಾನ್ಯತ್ವಕ್ಕೆ ಬಾಧಕವಿಲ್ಲದಂತೆ, ಚೀಫ್ ಕಮಿಷನರವರಿಗೆ—

(a) ನಿರ್ದೇಶಪಟ್ಟಜೇಕೆಂದು ಈ ಆಕ್ಟಿನಿಂದ ಕಂಠೋ ಕ್ಯವಾಗಿ ವಿಧಿಸಲ್ಪಟ್ಟ -ಯಾ ಅನುಮತಿಕೊಡಲ್ಪಟ್ಟ ಸವ.ಸ್ಯವಿ ಷಯಗಳ ಸಂಬಂಧವಾಗಿ

(b) ಪೈಸಿಂಬರ ಮತ್ತು ಪಂಚಾಯತದಾರರ ಉ ದ್ಯೋಗಗಳ್ಲಿ ಆಗುವ ಖಾಲಿಸ್ಥಾನಗಳನ್ನು ಕುರಿತು ಸವಾ ಚಾರಕೊಡುವಬಗ್ಗೆ, ಅಂಥಾ ಖಾಲಿಸ್ಥಾನಗಳನ್ನು ಭರತಿ ಮಾ ಡುವುದಕ್ಕೆ ಯೋಚಕಾಲಬೆಳಗಾಗಿ ಜಾಹಾವಣೆಗಳು ನಡೆಸಲ್ಪ ಡತಕ್ಕದ್ದೋ ಆ ಕಾಲವನ್ನು ಕ್ಲಿಪ್ತಪಡಿಸುವುದಕ್ಕೆ, ಮತ್ತು ಸಾ ಮಾನ್ಯವಾಗಿ ಈ ಆಕ್ಟಿನ ಮೇರೆಗೆ ನಮಸ್ಸ ಜಾಹಾವಣೆಗಳ ನ್ನು ಕ್ರಮಪಡಿಸುವ ಬಗ್ಗೆ ಮತ್ತು ಅಂಥಾ ಜಾಹಾವಣೆಗಳಿಗೆ ಸಂಬಂಧಪಡುವ ವಿವಾದಗಳನ್ನು ಯಾವ ಅಧಿಕಾರಸ್ಥರು ತೀ ರ್ಮಾನಿಸತಕ್ಕದ್ದೆಂದು ನಿರ್ಣಯಿಸುವ ಬಗ್ಗೆ,

(c) ಸ್ವತ್ತನ್ನು ಪಂಚಾಯಿಸುವರೆ, ಪಡೆದಿರುವರೆ ಮೈ ಪರ ಭಾರವಾಡುವರೆ ಮೆತ್ತು, ಕರಾರುಗಳನ್ನು ಮಾಡಿಕೊಳ್ಳುವರೆ ಪಂಚಾಯತಿಗೆ ಅಧಿಕಾರಗಳನ್ನು ಕೊಡಿಸುವ ಕುರಿತು,

(d) ಒಂದು ಪಂಚಾಯತಿಯವರ ಮುಖ್ಯಕಾರ್ಯ ನಿ ರ್ವಾಹಕ ಆಫೀಸರನಾಗಿ ಪೈಸಿಂಬರಯಂಬಸುಹುದಾದ ಅಧಿಕಾರಗಳ ಕುರಿತು,

(e) ಪಂಚಾಯತಿಗಳ ವಿಂಬರಿಂಗಗಳ ನಡವಳಿಕೆಯನು ತ್ತು ಕೋರಮ್ ಯಾನೆ ಸಾಕಾದ ವಿಂಬರರ ಕನಿಷ್ಠ ಸಂ ಖ್ಯೆಯನ್ನು ಕುರಿತು,

(f) ಪಂಚಾಯತಿಯ ಆಫೀಸರರ ಮನಪುಕೆರ ನೇಮಕವ ನ್ನು ಮತ್ತು ಅವರ ಸಂಬಳಗಳನ್ನು ಕುರಿತು,

(g) ಪಂಚಾಯತಿಗಳು ಇಡಬೇಕಾದ ಲೆಕ್ಕಗಳನ್ನು, ಅಂ ಥಾ ಲೆಕ್ಕಗಳ ಸಂಬಂಧಪಟ್ಟಾಂಶ-ನ ಪ್ರಕಟಣೆಯನ್ನು ಮತ್ತು, ಪಂಚಾಯತಿಯ ಫಂಡನ್ನು ಇಡುವ ಮತ್ತು ಅದರ ತಾಬೆಯ ಬಗ್ಗೆ ನೊಡಬೇಕಾದ ವಿವಾಡುಗಳನ್ನು ಕುರಿತು,

(h) ಪಂಚಾಯತಿಗಳು ಕಸುಪಿಸಿಕೊಡಬೇಕಾದ ರಿಟ ರ್ನುಗಳನ್ನು, ಸ್ಟೇಟ್‌ಮೆಂಟುಗಳನ್ನು ಪ ರಿಪೋ ರ್ಟುಗಳನ್ನು ಕುರಿತು,

(i) ಪಂಚಾಯತಿಗಳ ಜಮಾ ಬರ್ಚಿನ ಆಂದಾ ಪಟ್ಟಿ ಗಳನ್ನು ಕಮಿಸರಿನವ ಮತ್ತು ಪರಂಪೂರ್ ನೋಡ ತ ಕುರಿತು,

(j) ಈ ಆಕ್ಟು ಮೇರೆಗಿನ ಪ್ರತಟಣೆಗಳನ್ನು ಮತ್ತು ಯು ಕುಮುಂಗಳನ್ನು ಯಾವ ರೀತಿಯಲ್ಲಿ ಪ್ರಚುರಗೊಳಿಸತಕ್ಕುದೆಂಬ ದನ್ನು ನಿರ್ದೇಶಿಸುವ ಕುರಿತು,

(k) ಈ ಆಕ್ಟಿನ 37ನೇ -ಮತ್ತು38ನೇ ಪ್ರಕರಣಗಳ್ಲಿ ಹೇಳ ಲ್ಪಟ್ಟ ಸೇಲಧಿಕಾರಸಡಿಸುವ ಅಧಿಕಾರಸ್ಥರಿಗೆ ಒಪ್ಪಿಸಿಕೊ ಡೋಣಾದ ಅಧಿಕಾರಗಳನ್ನು ಚಲಾಯಿಸುವಲ್ಲಿ ಅವರ ತಿಳುವ ಳಿಕೆಯಬಗ್ಗೆ ಅನುಜ್ಞೆಗಳನ್ನು ನಿರ್ದೇಶಿಸುವ ಕುರಿತು,

(l) ಯಾವ ತರಗತಿಯ ಮೇಜಿಸ್ಟ್ರೇಟರಿಂದ ಈ ಆಕ್ಟು ಮೇರೆಗಿನ ತಕ್ಕೀರೇಗಳು ದುಬ್ಬಾಯ್ತುಮಾಡಲ್ಪಡತಕ್ಕದ್ದೆಂಬುದ ನ್ನು ನಿರ್ದೇಶಿಸುವ ಕುರಿತು,

(m) ಈ ಆಕ್ಟು ಮೇರೆಗೆ ತೀರ್ಮಾನದಬಗ್ಗೆ ಹುಟ್ಟುವ ಯಾವುವಾದರೂ ವಿಷಯಗಳ ಕುರಿತು ಯಾವುದಾದರೂ ಎರ ಹು ಸಾಲಯತಿಗಳಿಗೆ ಸುಬ್ಬೆ ಅಧವಾ ಒಂದು ಪಂಚಾಯತಿ ಯನವರಿಗೂ ಇತರ ಯಾವುದೆಂದು ಸ್ಥಳೀಕ ಅಧಿಕಾರಸ್ಥಾನದ ನವರಿಗೂ ಮಳ್ಳೆ ರುಟ್ಟುವ ಫನ್ನಾಫಿನಿಯಮಗಳನ್ನು -ಯಾ-ವಿಸಾ ದಗಳನ್ನು ತೀರಿಸುವ ಕುರಿತು,

ಕೈಗುಗಳನ್ನು ಏರ್ಪಡಿಸಲು ಅಧಿಕಾರವಿರತಕ್ಕದ್ದು.

(3) ಈ ಆಕ್ಟಿನೆರೆಗೆ ಕೈಗುಗಳನ್ನು ಏರ್ಪಡಿಸುವ ಅಧಿಕಾರವು ಅವನ್ನು ಮುಂಚಿತವಾಗಿ ಪ್ರಕುಗೊಳಿಸತಕ್ಕ ದೆಂಬ ತರತಿಗೆ ಒಳಪಟ್ಟಿರತಕ್ಕದ್ದು.

ನೊಟಿಸುಗಳ ನಮೂನೆ

45. ಈ ಆಕ್ಟಿನ ನಿಬಂಧನೆಗಳಮೇರೆಗೆ ಕೊಡಲ್ಪಟ್ಟ ಯಾ ಸಾಂದರ್ಭಿಕ ಮೊತ್ತೋಣಾದ ನೆನುಸ್ಸ ನೋಟಿಸುಗಳು ಒರಪ ಮೂಲಕವಾಗಿರತಕ್ಕದ್ದು.

ಒಳಪಾನುಬಂಧಗಳನ್ನು ಪ್ರಚುರಗೊಳಿಸೋಣ.

46 ಈ ಆಕ್ಟುಮೇರೆಗಿನ ಪ್ರತಿ ಒಳಕಾನೂನು, ಪ್ರತ್ಯೇಕ ವಾದ ಒಂದು ವಿಧಾನಸ್ಸ ಈ ಆಕ್ಟಿನಮೇರೆಗೆ ನಿರ್ದೇಶಿಸಲ್ಪ ಟ್ಟಿದ್ದರೆಲೇ ವಿನಾ ಅಧವಾ ಪಂಚಾಯತಿಯವರಿಂದ ಅಜ್ಞಾಪಿಸ ಲ್ಪಟ್ಟಿದ್ದರೇಲೆ ವಿನಾ, ಕನ್ನಡಭಾಷೆಯಲ್ಲಿ ಒಟೆಯಲ್ಪಟ್ಟು ಅಧ ನಾತನವಾಗಿ ಮಾಡಲ್

"ಕೊಡಗು"

ಸರ್ಕಾರೀ ಇತರೆ ನವಂಬರ್ ತಾ. ೬ನೇ ಶುಕ್ರವಾರ

ಅನಾರೋಗ್ಯದಿಂದ ಸಂಭವಿಸು ತ್ತಿರುವ ನಷ್ಟ.

ಬಂಗಾಳದ ಆರೋಗ್ಯ ಇಲಾಖೆಯ ಇಂಜಿನೀಯರ್ ಮೆ. ಜಿ ಜ್ಯಾನ್ಸ್‌ಬಿ ವಿಲಿಯಮ್ಸ್ ಎಂಬವರು " ಹಿಂದುಸ್ಥಾನಿ ದ ಇರ್ದಜನಿಕ ಆರೋಗ್ಯ " ವೆಂಬ ವಿಷಯದ ಮೇಲೆ ಕಳ್ತ ತ್ಯದಲ್ಲಿ ಮಾಡಿದ ಉಪನ್ಯಾಸವನ್ನು ಓದಿದರೆ ಅನಾರೋಗ್ಯದಿಂ ದ ಆಗುತ್ತಿರುವ ಆರ್ಥಿಕ ನಷ್ಟವು ಹಿಂದುಸ್ಥಾನದ ಹಿತಚಿಂತಕರ ಮನಸ್ಸನ್ನು ಬೆದರಿಸದೆ ಇರಲಾರದು. ಬೆದರಿಕೆಯುನ್ನುಂಟು ಮಾಡುವ ವಿಷಯವಾದರೂ ಇರುವ ಸಂಗತಿಗಳನ್ನು ತಿಳಿದು ಕೊಂಡು ಜನರ ಆರೋಗ್ಯಸ್ಥಿತಿಯನ್ನು ಉತ್ತಮಪೀಠಿಗೆ ತಂ ದುಕೊಳ್ಳಲಿಕ್ಕೆ ಸರಕಾರವೂ ಪ್ರಜೆಗಳೂ ಪ್ರಯತ್ನ ಪಡದಿರೋ ದರೆ ಹಿಂದುಸ್ಥಾನದ ಜನಸಂಖ್ಯೆಯೂ ಕಡಿಮೆಯಾಗುತ್ತಾ ಪ ರುವದಲ್ಲದೆ ಬಹತನವು ಹೆಚ್ಚಾಗುತ್ತಾ ಹೋಗುವದರಲ್ಲಿ ಸಂಶ ಯವಿಲ್ಲ ಹಿಂದುಸ್ಥಾನಕ್ಕೆ ತಡೆಯಬಹುದಾದ ಖಾಯಿಲೆಗ ಳಿಂದ ಇನ್ನೂರುಕೋಟಿ ರೂಪಾಯಿನಷ್ಟು ಮೂಲಧನದ ನಷ್ಟ ವಿದೆಯೆಂತ ಲೆಬ್ಬಾಹಕಿದ್ದಾರೆ ಈ ನಷ್ಟದಲ್ಲಿ ಕೊಡಗುದೇಶ ದ ಬಾಗವೆಷ್ಟು ಎಂಬದನ್ನೂ ವಾಚಕರಿಗೆ ತಿಳಿಸಿಕೊಟ್ಟು ಆ ನ ಷ್ಟವನ್ನು ಹೋಗಲಾಡಿಸಲು ಪ್ರತಿಯೊಬ್ಬನೂ ಯೋಚಿಸು ವಂತೆ ಮಾಡಬೇಕೆಂಬುದೇ ನಮ್ಮ ಈ ಲೇಖನದ ಉದ್ದೇಶವಾ ಗಿದೆ

ಮಲೇರಿಯಾ, ವಾಂತಿ ಭೇದಿ, ಉಸಿರಾಕ ಭೇದಿ, ಸ ಸಾ ತಪಾಯಿಲೆಗಳನ್ನು ತಡೆಯಬಹುದಾದ ಖಾಯಿಲೆಗಳೆಂತನೆ ಜ್ಯಾ ನ್ಸ್‌ಬಿ ವಿಲಿಯಮ್ಸ್‌ರು ಹೇಳಿರುತ್ತಾರೆ. ಶಕ್ತ ವಿಪಾರ್ಡುಗಳ ನ್ನು ಮಾಡಿದರೆ ಸಾವಿರ ಜನಸಂಖ್ಯೆಯಲ್ಲಿ 15ರಷ್ಟು ಜನರ ಜೀ ವ ಉಳಿಸಬಹುದೆಂತ ಅಂದಾಜು ಮಾಡಿದ್ದಾರೆ. ಒಟ್ಟು ಇಂಡಿಯದಲ್ಲಿ ಸಾವಿರಕ್ಕೆ 24 02ರಷ್ಟು ಜನರು 1922ನೇ ಇ ಸವಿಯಲ್ಲಿ ಸತ್ತಿದ್ದಾರೆ ಇವರ ಅಂದಾಜು ಮೇರೆ ಪ್ರಯ ತ್ನಪಟ್ಟರೆ ಸಾಯುವವರ ಸಂಖ್ಯೆಯನ್ನು ನೂರು ಅರ್ಧದ ಷ್ಟು ಕಡಿಮಮಾಡಬಹುದು 1000ದಲ್ಲಿ 15ಜನರ ಜೀವ ಉ ಳಿಸಿದರೆ ಒಟ್ಟು ಹಿಂದುಸ್ಥಾನದಲ್ಲಿ ವರ್ಷದಲ್ಲಿ 37,50,000ಜೀವ ಉಳಿಯುತ್ತದೆ. ಇಂಗ್ಲೆಂಡಿನಲ್ಲಿ ಜನಸಂಖ್ಯೆಯ 1000ಕ್ಕೆ 13 ರಷ್ಟು ಸೂತ್ರ ಮರಣ ಸಂಖ್ಯೆಯಂತೆ ಹೀಗಿರುವಾಗ ಹಿಂದು ಸ್ಥಾನದ ಮರಣಸಂಖ್ಯೆಯನ್ನು ಸಾವಿರಕ್ಕೆ 13ರಷ್ಟು ಕಡಿಮೆ ಮಾಡುವದು ಅಸಾಧ್ಯವಲ್ಲ.

ಇಂಗ್ಲೆಂಡಿನಲ್ಲಿ ಆಗುತ್ತಿರುವ ಪ್ರತಿಯೊಂಗು ಸಾವಿಗೂ 180ವಾರಗಳ ಖಾಯಿಲೆ ಇದೆಯಿಂತ ಅಂದಾಜು ಮಾಡಿದ್ದಾರೆ. ಹಿಂದುಸ್ಥಾನದಲ್ಲಿ ಮರಣ ಹೆಚ್ಚಾದ್ದರಿಂದ ಖಾಯಿಲೆಯ ಕಾಲ ವೂ ಹೆಚ್ಚಾಗಿಯೇ ಇರಬೇಕು. ಆದರೂ ಇಂಗ್ಲೆಂಡಿನ ಅಂ ದಾಜನ್ನೇ ಹಿಂದುಸ್ಥಾನಕ್ಕೆ ಉಪಯೋಗಿಸಿದರೂ ಸಹ ಪ್ರಯ ತ್ನ ಪಟ್ಟು ಉಳಿಸಬಹುದಾದ 37,50,000 ಜೀವಗಳಿಗೆ 67,50,00 000 ವಾರಗಳ ಖಾಯಿಲೆಯನ್ನು ನಿಲ್ಲಿಸಬಹುದೆಂತ ಲೆಬ್ಬಾಹಕಿದ್ದಾರೆ ಒಬ್ಬ ಮನುಷ್ಯನಿಗೆ ಒಂದುವಾರ ಖಾ ಯಿಲೆಯೊದರೆ 2ರೂ. ನಷ್ಟವೆಂತ ಅಂದಾಜು ಮಾಡಿದ್ದಾರೆ. ತಡೆಯ ಬಹುದಾದಖಾಯಿಲೆಗಳನ್ನು ನಿಲ್ಲಿಸಿದರೆ135000000000ರೂ ಪಾಯಿ ಲಾಭವಾಗುವದೂ ಅಲ್ಲದೆ ಪ್ರತಿಯೊಂದು ಜೀವಕ್ಕೆ 200ರೂ ಬೆಲೆಕಟ್ಟಿ ಉಳಿಯಬಹುದಾದಜೀವಗಳಿಗೆ 7500000000 ರೂಪಾಯಿ ಲಾಭವಾಗುತ್ತದೆಂತ ಲೆಕ್ಕಹಾಕಿದರು. ಈ ಮೊ ಬಲಗುಗಳ ಉತ್ಪತ್ತಿಯೂಗಬೇಕಾದರೆ 2000000000 ಪೌಂಡ್ ಮೂಲಧನವೇಕು, ಎಂತ ವಾದಿಸಿದ್ದಾರೆ

ಈ ರೀತಿ ಸೆಂಖ್ಯೆಗಳನ್ನು ಹಾಕುತ್ತಾ ಬಂದರೆ ಎಲ್ಲರಿಗೂ ಅರ್ಥವಾಗಲಾರದು ಆದ್ದರಿಂದ ಸ್ವಲ್ಪ ವಿವರಿಸಬೇಕಾಗಿದೆ. ಮನುಷ್ಯನು ಆರೋಗ್ಯವಾಗಿದ್ದರೆ ಹಿಂದುಸ್ಥಾನದಲ್ಲಿ 70ವರ್ಷ ಪ ರ್ಯಾಯದನರೆಗಾದರೂ ಬದುಕಬಹುದಲ್ಲವೇ ? ಚಿಕ್ಕಮಕ್ಕಳ್ ಳಾಗಿರುವಾಗಲೇ ಸತ್ತುಹೋದರೆ 70ವರ್ಷ ಪ್ರಾಯದಲ್ಲಿ ಮೂ ಡಬಹುದಾದ ಕುಂಬಾದನೆಯೆಲ್ಲಾ ನಷ್ಟವಾಯಿ ತ್ತಲ್ಲನೇ ? ಸಂ ಪೂರ್ಣ ಜೀವಮಾನಕಾಲಕ್ಕಿಂತ ಮೊದಲೇ ಸತ್ತ ಮನುಷ್ಯನಿಂ ದ ಸರಾಸರಿ 200ರೂ ಉತ್ಪತ್ತಿಯೂಗುತ್ತಿತ್ತೆಂತ ಲೆಬ್ಬಾಹಕು ವುದರಲ್ಲಿ ತಪ್ಪೇನೂ ಇಲ್ಲವೆಂತ ನಮಗೆ ಸ್ಪಷ್ಟವಾಗುತ್ತದೆ. ಪ್ರ ತಿಯೊಂದು ಮರಣ ಸಂಭವಿಸದೇಕಾದರೆ ಖಾಯಿಲೆಯೊಂದಿ ಗೆ ನ ರಳುತ್ತಿದ್ದ ವರ ಸಂಖ್ಯೆಯು ತುಂಬಾ ಇರಬೇಕಲ್ಲನೇ ! ಖಾಯಿ ಲೆ ಒಂದಪಲ್ಲರೂ ಸಾಯಿಸಬಿಲ್ಲವಲ್ಲ ಒಂದು ಸಾವಾಗ ಬೇಕಾದರೆ 180ವಾರ ಒಬ್ಬನು ಖಾಯಿಲೆಯಲ್ಲಿ ಮಲಗಿದಷ್ಟು ಖಾಯಿಲೆ ಇರಬೇಕೆಂತ ಇಂಗ್ಲೆಂಡಿನಲ್ಲಿ ಕಂಡುಹಿಡಿದಿದ್ದಾರೆ. ಒಬ್ಬ ಕೂಲಿಯಳಾದರೂ ಸೆತ ಕ್ಕೆ ಕೆಲಸದಿಂದ ದಿವಸಕ್ಕೆ ಆಣಾ ಮೇರೆ ವಾರಕ್ಕೆ ರೂ 2-೩-೦ ಸಂಪಾದಿಸುತ್ತಾನೆ ಅಂಥವನು ಒಂದುವಾರ ಖಾಯಿಲೆಯಲ್ಲಿ ಮಲಗಿದರೆ ಅಷ್ಟು ಮೊಬಲಗು ನಷ್ಟವಾಯಿತಲ್ಲವೇ ? ಖಾಯಿ ಲೆಯು ಒಂದುವಾ ರಕ್ಕೆ ಬರೂ. ನಷ್ಟವೆಂತ ಎಣಿಸೆಮಾಡುವದು ಬಹಳ ಕಡಿಮೆದ ಶವಾಯಿತು ಕಡಿಮೆ ಲೆಬ್ಬಾದ ಮೇರೆಯೇ ಎಣಿಸಿಕೊಂಡರೂ ಸಹ್ಯ ದೊಡ್ಡಧನ ನಷ್ಟವಾಗುತ್ತದೆಯೆಂತ ಕಂಡುಹಿಡಿದಿರುವಾ ಗ ಸಯೂದ ಲೆಬ್ಬಾಹಕಿದರೆ ಆಗುವ ನಷ್ಟವನ್ನು ವಾಚಕರು ಊಹಿಸಿಕೊಳ್ಳಬೇಕಷ್ಟೆ.

ಒಟ್ಟು ಹಿಂದೂಸ್ಥಾನದಲ್ಲಿ 1922ರಲ್ಲಿ ಮರಣ ಸಂಖ್ಯೆ ಯು ಸಾವಿರಕ್ಕೆ 24'0' ಆಗಿದ್ದಾಗ ನನ್ನು ಕೊಡಗು ದೇಶ ದಲ್ಲಿ ಸರಕಾರಿ ಪಾಪ್ಲೆ ಮೇರೆ 34.60ರಷ್ಟು ಆಗಿತ್ತು. ಹಿಂದಿ ನವದು ವರ್ಷಗಳ ಸರಾಸರಿ ಮೇರೆ 36 26 ಆಗಿತ್ತು. ಮರಣಗಳ ಲೆಬ್ಬವು ಸರಕಾರದ ಇತಾಹಿಗಳಲ್ಲಿ ಸರಿಯಾಗಿ ಇಡಲ್ಪಡು ತ್ತಿಲ್ಲವೆಂತ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಸರಿಯಾದ ಲೆಬ್ಬ ಸಿಕ್ಕಿದರೆ ಮರಣದ ದಾಮಾಶಾಯಿಯು ಇನ್ನೂ ಹೆಚ್ಚಾ ಗಿಯೇ ಇರುತ್ತಿತ್ತು ಎಂಬದರಲ್ಲಿ ಏನೂ ಸಂಶಯವಿಲ್ಲ. ಮೆ. ವಿಲಿಯಮ್ಸ್‌ರವರು ಹೇಳಿರುವ ಮೇರೆ 1000ಕ್ಕೆ 15ರಷ್ಟು ಮರಣಗಳನ್ನು ಪ್ರಯತ್ನಪಟ್ಟು ನಿಲ್ಲಿಸಿದರೆ ಕೊಡಗಿನಲ್ಲಿ ವರ್ಷ ಒಂದರ 2150 ಜೀವಗಳನ್ನು ಉಳಿಸಬಹುದು ಕೊಡಗಿನ ಲ್ಲಿ ಮಲೇರಿಯೊ, ಹುಳವರ್ಮ ಖಾಯಿಲೆಗಳು ಬಹಳ ಹ ಚ್ಚಾಗಿರುವದರಿಂದ ತಪ್ಪಿಸಬಹುದಾಗ ಮರಣಗಳ ಸಂಖ್ಯೆಯು ಬಹಳ ಹೆಚ್ಚಾದೀತೆಂತ ನಮಗೆ ತೋರುತ್ತದೆ ಸರಕಾರಿ ರಿ ಪೋರ್ಟಿನಿಂದಲೇ ಮಲೇರಿಯದಿಂದ ಸಾವನಿದ ವ ರಣಗಳು 2366, ಇತರ ಜ್ವರಗಳಿಂದ 2171 ಎಂತ ಕಂಡುಬರುತ್ತದೆ ನ ನ್ನ ಅಭಿಪ್ರಾಯದಲ್ಲಿ ಕೊಡಗಿನಲ್ಲಿ ಜ್ವರದಿಂದ ಆಗುವ ಮ ರಣಗಳಲ್ಲಿ ಶೇಕಡ 99ರಷ್ಟು ಮಲೇರಿಯದಿಂದಲೇ ಆಗುತ್ತಿದೆ ಯೆಂತ ತೋಮತ್ತದೆ ಭೇದಿ, ರಕ್ತಭೇದಿ, ಪ್ರಸವ ಕಾಲದ ಕುರಣ ಮುಂತಾದ್ದರಲ್ಲಿ ಹೆಚ್ಚಿನ ಭಾಗ ಮಲೇರಿಯ ದಿಂದಲೇ ಸಂಭವಿಸುತ್ತಿರಬೇಕು ಆದ್ದರಿಂದ ತಕ್ಕ ಪ್ರಯ ತ್ನತೆಗದುಕೊಂಡರೆ ನಿಲ್ಲಿಸಬಹುದಾದ ಮರಣ ಸಂಖ್ಯೆ 3000 ಪೂತ ಧಾರಾಳವಾಗಿ ಹೇಳಬಹುದು ಈ ಜೀವಗಳ ಬೆಲೆ ಯು ಮೇಲ್ಕಂಡಲೆಬ್ಬದನೆಯಂತೆ 6,00,000ರೂಪಾಯಿ ಆಯಿತು. ಈ 3000 ಮರಣವಾಗಬೇಕಾದರೆ 540000 ವಾರಗಳ ಖಾ ಯಿಲೆ ಇರಬೇಕು ಇದರ ಬೆಲೆಯು 1080000ರೂ ಆಯಿ ತು ಪ್ರಯತ್ನಪಟ್ಟು ಉಳಿಸಬಹುದಾದ ಸಾಲಿಯೂನ ನಷ್ಟ ವು 16ಲಕ್ಷರೂಪಾಯಿ ಆಯಿತು ಇಷ್ಟು ಉತ್ಪತ್ತಿಯೂಗ ಬೇಕಾದರೆ 2ಕೋಟಿ ರೂಪಾಯಿ ಮೂಲಧನ ಬೇಕ

ಇಂಥಾ ಅನ್ಯ ತರಾದಂಥ ಅನಾವಶ್ಯಕವಾದ ನಷ್ಟವಾಗು ತ್ತಿರುವದನ್ನು ನಿಲ್ಲಿಸಲು ಸಹಿಯುತ್ತಿರುವ ಪ್ರಯತ್ನವು ಅತಿ ಸ್ವಲ್ಪವಾಗಿದೆ

ಕೌನ್ಸಿಲ್ ರಚನವು ಮೀರಿ ಮೇಲೇರಿಯೊದ ಕಾರಣವನ್ನು ಕಂಡ ಹಿಡಿದು ತಪ್ಪಿಸಲು ಸಾಧ್ಯರಗಳನ್ನು ಸೂಚಿಸಲು ಒಂದು ಕಮಟಿಯಾಗಿದೆ ಈ ಕಮಿಟಿಯ ಕೆಲಸದಿಂದ ಜನರ ಘನ ನ್ಸಿಗೆ ಮಲೇರಿಯೂದ ಜಾಗರೆಯ ಮಹತ್ವವು ಕೆಲವು ಮಟ್ಟಿ ಗಾದರೂ ನಾಟಿದರೆ ಪ್ರಯೋಜನವಾದೀತು ಮಲೇರಿಯ ವು ಸಂಪೂರ್ಣವಾಗಿ ನಿರ್ಮೂಲ ಮಾಡಬಹುದಾದ ಖಾ ಯಿಲೆಯೆಂತ ತಿಳಿದವರು ಕಂಡುಹಿಡಿದಿದ್ದಾರೆ ಸಂಪೂರ್ಣ ವಾಗಿ ಹೋಗಲಾಡಿಸಬೇಕಾದರೆ ತುಂಬಾ ಹಣ ಬೇಕಾದರೂ ಸ್ವಲ್ಪ ಖರ್ಚಿನಿಂದ ಅದರ ಹಾವಳಿಯನ್ನು ಬಹಳ ಕ ಡಿಮೆನೂಡಬಹುದೆಂತ ಮೇಲ್ಕಂಡ ಉಪನ್ಯಾಸಕರ ಅಭಿಪ್ರಾ ಯವಾಗಿದೆ ಹುಳ್ಳನರ್ಮ ಅಂದರೆ ತೊಕ್ಕೆಹುಳದಿಂದ ಬೂ ಜರ ಆರೋಗ್ಯವು ಬಹಳ ಕಡಿಮೆಯೂಗಿದೆ ಈ ಖಾ ಯಿಲೆ ಇದ್ದರೆ ಕೆಲಸ ಮಾಡುವ ತಕ್ಕಿಯು ಕಡಿಮೆಯೂಗಿ ತಂ ಬಾ ನಷ್ಟವಾಗುತ್ತದೆ ಗ್ರಾಮೊತರಗಳಲ್ಲಿ ಕೊಕ್ಕೆ ಹುಳದ ಹಾವಳಿ ಎಷ್ಟುದೆಯೆಂತ ಸ್ಯಾನಿಟರಿ ಆಫೀಸರಾದ ಸಿಬಾ ಸ ಜ್ಞರು ಆಮೂಯಸಿಕೆ ಮಾಡಿ ಜನರಿಗೆ ತಿಳಿಸಿಕೊಡಬೇಕು. ಈ ಖಾಯಿಲೆಗಳನ್ನು ತಪ್ಪಿಸಲಿಕ್ಕೆ ಮಾಡಬೇಕಾದ ಕೆಲಸಗಳ ನ್ನೂ ಜನರಿಗೆ ತಿಳಿಸಿಕೊಡಲು ಸ್ಯಾನಿಟರಿ ಇನ್ಸ್‌ಪೆಕ್ಟರುಗಳು ನಾಲಕ್ಕಾರಾದರೂ ಬೇಕು ಈ ದೇಶದಲ್ಲಿ ಈಗ ಇರುವ ಒ ಬ್ಬ ಸ್ಯಾನಿಟರಿ ಇನ್ಸ್‌ಪೆಕ್ಟರಿಂದ ಜನರಿಗೆ ಬೇಕಾದಷ್ಟು ಸಹಾ ಯ ಸಿಕ್ಕುವದು ಸಾಧ್ಯವೇ ಇಲ್ಲ. ನಾವು ಮೊದಲೇ ಹೂ ಚಿಸಿದಂತೆ ಹೊಸದಾಗಿ ಬರುವ ಗ್ರಾಮ ಪಂಚಾಯತಿ ಕ್ರಮ ದಿಂದ ಗ್ರಾಮಗಳ ಆರೋಗ್ಯಸ್ಥಿತಿಯನ್ನು ಹೆಚ್ಚಿಸಲು ಅವಕಾ ಶವಿದೆ. ಗ್ರಾಮ ಪಂಚಾಯತಿಗಳ ಉಪಯೋಗದ ವಿಷಯ ದಲ್ಲಿ ಕೆಲವು ಮಟ್ಟಿಗೆ ಭಿನ್ನಾಭಿಪ್ರಾಯವಿದೆ. ಗ್ರಾಮದ ಆ ಧಿಕ್ಯದ್ದಿಗೆ ಬೇಕಾದ ನೀರಾವನ್ನು ಗ್ರಾಮದವರು ಹೊಸ ತೆರಿಗೆ ಯಿಂದಲೇ ಒಡಗಿಸಿಕೊಳ್ಳಬೇಕುಬದುಬದುಲೇ ಪಂಚಾಯತಿಗ ಳ ಮೇಲೆ ಅಕ್ಕೇಪಣೆ ಇರುವದಾಗಿದೆ ಆದ್ದರಿಂದ ದೇಶಕ್ಕೆ ಆಗುತ್ತಿರುವ ಭಯಂಕರ ನಷ್ಟಕ್ಕೆ ಕಾರಣವಾದ ಅನಾರೋಗ್ಯ ವನ್ನು ಹೋಗಲಾಡಿಸಲು ಸರಕಾರದವರೇ ಮುಂದೆ ಬಂದು ಪಂಚಾಯತರಿಗೆ ಬೇಕಾದಷ್ಟುಹಣಕೊಟ್ಟು ಸಲಹೆಯನ್ನು ಮೇ ಲ್ವಿಚಾರಣೆಯಲ್ಲಿರೆ ತುಂಬಾ ಪ್ರಯೋಜನವಾದೀತೆಂತ ನಮಗೆ ಅಶೆ ಇದೆ.

ಕೌನ್ಸಿಲಿನಲ್ಲಿ ಜೆಚ್ಚಿನ ಸವಾಲುಗಳು.

ಸ್ಥಾಯಿವಿಧಾಯಕ ಸಭೆಗಳಲ್ಲಿ ಸರಕಾರದ ಮೆಂಬರುಗಳ ನ್ನು ಸವಾಲ್ ಕೇಳುವ ಹಕ್ಕು ಸಭೆಯ ಮೆಂಬರುಗಳಿಗೆ ಇ ತುವಂಥಾದ್ದು ಬಹಳ ಅಮೂಲ್ಯವಾದದ್ದಾಗಿದೆ. ಈ ಸವಾ ಲುಗಳು ಬಂದಾವೆಂಬ ಭಯದಿಂದಲೇ ಸರಕಾರಿ ಇಲಾಖೆಗಳ ಎ ಲ್ಲಾ ಉದ್ಯೋಗಸ್ಥರುಗಳು ತುಂಬಾ ಜಾಗರೂಕರಾಗಿ ತಮ್ಮ ತ ಮ್ಮ ಕೆಲಸಗಳನ್ನು ಮಾಡಬೇಕಾಗುತ್ತೆ. ನಮ್ಮ ದೇಶದ ಕೌ ನ್ಸಿಲಿಗೂ ಈ ಸವಾಲು ಹಾಕುವ ಹಕ್ಕು ಕೌನ್ಸಿಲ್ ಮಂಜೂ ರಾದಾಗಲೇ ಸಿಕ್ಕಿದೆ ಆದರೆ ಈ ಸವಾಲುಗಳಿಗೆ ಸರಕಾರದಿಂದ ಜವಾಬು ದೊರಕ ಕೂಡಲೇ ಆ ಜವಾಬಿನಿಂದ ಹುಟ್ಟು ವ ಹೆ ಚ್ಚಿನ ಸವಾಲು ಕೇಳುವ ಹಕ್ಕು ಈ ವರೆಗೆ ಮೊದಲು ಸವಾ ಲು ಕೇಳಿದ ಮೆಂಬರನಿಗೆ ಮತ್ತೆ ಇತ್ತು, ತಾ 16—3—25ರಲ್ಲಿ ನಡೆದ ಕೌನ್ಸಿಲಿನಲ್ಲಿ ಈ ಹೆಚ್ಚಿನ ಸವಾಲು ಕೇಳುವ ಹಕ್ಕು ಮೊದಲಿನ ಸವಾಲು ಕೇಳಿದವನಿಗಷ್ಟಲ್ಲದೆ ಎಲ್ಲಾ ಮೆಂಬರುಗಳಿ ಗೂ ಇರಬೇಕೆಂತ ರಚನವು ಮಂಜೂರಾಯಿತು ಕೌನ್ಸಿಲಿನ ಈ ಕೋರಿಕೆಯನ್ನು ಚೀಫ್ ಕಮಿಷನರು ನೆರವೇರಿಸಿಕೊಟ್ಟಿ ರುತ್ತಾರೆ ಇದಕ್ಕಾಗಿ ನಾವು ಅವರಿಗೆ ಅಭಿವಂದಿಸುತ್ತೇವೆ. ಈ ಹೆಚ್ಚಿನ ಸವಾಲು ಕೇಳುವ ಹಕ್ಕು ಎಲ್ಲಾ ಮೆಂಬರುಗಳಿ ಗೂ ಬೇರೆ ಪ್ರಾಂತ್ಯಗಳ ಕೌನ್ಸಿಲುಗಳನ್ನಿ ವೆಂದಿನಿಂದಲೇ ಇತ್ತು ನನ್ನು ದೇಶದ ಕೌನ್ಸಿಲಿಗೆ ಈ ಹಕ್ಕು ಇಲ್ಲದೆ ಇ ದ್ದದ್ದು ಒಂದು ಕೊರತೆಯೊಗಿಯೇ ಇತ್ತು. ಈ ಲೋಪವ ನ್ನು ಹೋಗರಾಡಿಸಲು ಕೌನ್ಸಿಲಿನವರೂ, ಸರಕಾರವನರೂ ಸಯಕರಿಸಿದ್ದು ಬಹಳ ಸಂತೋಷಕರ ಈ ಹೊಸ ಹಕ್ಕನ್ನು ಜೆನ್ನಾಗಿ ಉಪಯೋಗಿಸಿದರೆ ಬಹಳ ಪ್ರಯೋಜನವೂಡಿಕೊಳ್ಳ ಬಹುದು. ಮದ್ರಾಸ್ ಕೌನ್ಸಿಲಿನಲ್ಲಿ ಈ ಕರದ ಸವಾಲ್ ಜ ವಾಬುಗಳು ಒಂದು ವಿಧದ ಜರ್ನಿಯಾತೇ ಆಗುತ್ತದೆ ಈ ಜೆಚ್ಚಿನ ಸವಾಲ್ ಜವಾಬುಗಳನ್ನು ಜರ್ನಿಯ ರೂಪಕ್ಕೆ ಇಳಿ ಸದೇನೇ ಸದುಪಯೋಗಪಡಿಸಿಕೊಳ್ಳಬಹುದು.

ಸಂಚಾಯಿತಿ ಮಸೂದೆ ಆಕ್ಷೆ.

ಕೊಡಗು ಕೌನ್ಸಿಲಿನ ಮುಂದೆ ಚರ್ಚೆಗೆ ತರಲ್ಪಟ್ಟಿರುವ ಗ್ರಾಮಪಂಚಾಯತಿಯ ಮಸೂದೆ ಆಕ್ಷೆಯ ಸಂಪೂರ್ಣವಾಗಿ ಈ ಸಂಚಿಕೆಯ 2, 3, 4, 5, ಮತ್ತು 8ನೇ ಪುಟಗಳಲ್ಲಿ ಕೆಲವು ಮಹಾನುಭವರ ಉದಾರಾಶ್ರಯದಿಂದ ಪ್ರಕಟಿಸಿದ್ದೇ ವೆ ಗ್ರಾಮಸ್ಥರು ಸ್ವತಃ ಗ್ರಾಮಕಾರ್ಯಗಳ ಆಡಳಿ ತೆಯನ್ನು ನಡಿಸುವಂತೆ ಅವಕಾಶಕೊಡಲಿಕ್ಕಿರುವ ಈ ಆಕ್ಷೆಯ ಪ್ರತಿಯೊಂದು ಸೆಕ್ಷನ್ನನ್ನು ಗ್ರಾಮಸ್ಥರು ಜೆನ್ನಾಗಿ ಓದಿ ಅ ರ್ಥಮಾಡಿಕೊಂಡು ಅಲ್ಲಲ್ಲಿ ಏನಾದರೂ ಮಾಡಿ ಚರ್ಚೆಸಿ ತಮ ಗೆ ಬೇಕಾದ ಒದಲಾವಣೆಗಳನ್ನು ಸೂಚಿಸಿದರೆ ಮಸೂದೆಯನ್ನು ಚರ್ಚಿಸಿ ಸಂಪದಿಸಲು ವಿಸರ್ಜಾದಾರುವ ಸೆಲೆಕ್ಟ್ ಕಮಿಟಿಯ ಎದಿಗೆ ದೇಶದನವ ಅಭಿಪ್ರಾಯವನ್ನು ಅರಿತುಕೊಂಡು ಅದರಂ ತೆ ಸಿದಪಡಿಸಲು ಸಹಾಯಮಾಡಿದಂತಾಗುವದು ಇಲ್ಲದೆ ಕೌ ನ್ಸಿಲಿನಲ್ಲಿರುವ ನೇಚದ ಪ್ರತಿನಿಧಿಗಳಿಗೆಮಸೂದೆಯಜರ್ಚೆಯಲ್ಲಿ ದೇಶದ ನಿಜಸ್ಥಿತಿಗಳುಗುಣವಾಗಿ ತಿದ್ದುಪಡಿಗಳನ್ನು ಮಾಡಲು ಅ ನುಕೂಲವಾಗುವದು ಆದುದರಿಂದ ಗ್ರಾಮಸಿವಾಸಿಗಳು ಈ ಆಕ್ಷೆಯ ಕಡೆ ತುಂಬಾ ನಿಗಾಹಾಯಿಸಲಾಗಿ ಆಸಿಸುತ್ತೇವೆ

ವಿಮರ್ಶೆ.

ತುಲಸೀರಾಮಾಯಣ—ಸಚಿತ್ರಪತ್ರಿಕೆ ಭಾಗ 1,ಲೇಖಕ ಶ್ರೀ ದತ್ತಾತ್ರೇಯ ಕೃಷ್ಣಭಾರದ್ವಾಜ. ವಿಳಾಸ— ಆನಂದಾಶ್ರಮ ಒನವನಗುಡಿ, ಬೆಂಗಳೂರು ಸಿಟಿ. ವಾರ್ಷಿಕ ಚಂದ — ಸ್ಟೇಜ್ ಕಾಗದ ಪ್ರತಿಗೆ ರು 5. ಸಾಧಾರಣ ಕಾಗದದ ಪ್ರತಿಗೆ ರು 4. ಬಿಡಿ ಪ್ರತಿಗೆ 8 ಆಣೆ

ಬೈಬಿನಿಂ ಭಾರತವು ಕನ್ನಡಿಗರಿಗೆ ಎಷ್ಟು ಆದರಣೀಯ ವಾದದ್ದೋ, ತುಲಸಿ ರಾಮಾಯಣವು ಔತ್ತರೇಯರಿಗೆ ಅತ್ಯ ಪ್ರಿಯತಮವಾದ ಗ್ರಂಥವಾಗಿದೆ. ಹಿಂದೀಭಾಷೆಯ ಈ ಗ್ರಂಥವನ್ನು ಕನ್ನಡಕ್ಕೆ ಅನುವಾದಿಸ ವ ಭಾರವನ್ನು ಶ್ರೀ. ಭಾರದ್ವಾಜರು ಮೆಗೆರುವರು. ಇವರಿಗೆ ನಮ್ಮ ಧನ್ಯವಾ ದಗಳು ನಮಗೆ ದೊರೆತಿರುವ ಪ್ರಥನು ಸಂಚಿಕೆಯು ಏನು ನಾಗಿರಿ ಸಭೆಗಳಿಂದ ಸರಿತೋಧಿಸಲ್ಪಟ್ಟ ರಾಮಚರಿತ್ರ ಮಾನಸ ಮೆಂಬ ಶುದ್ಧ ಗ್ರಂಥವನ್ನು ಆನುಸರಿಸಿ ರಚಿಸಲಾಗಿದೆಯಂದು ತೋರುತ್ತದೆ. ಈ ರಾಮಾಯಣ ಗ್ರಂಥದ ಅನುವಾದವು ವ ರುಷದ ಆತ್ಯದೊಳಗೆತೆಯಲಿ ಬಾಸರ ಚರಿತ್ರೆಯನ್ನೊಳಗೊಂಡು ಮುಕ್ತಾಯವಾಗುತ್ತದೆ

ವಾಲ್ಮೀಕಿ ರಾಮಾಯಣಕ್ಕೂ ತುಲಸಿ ರಾಮಾಯಣಕ್ಕೂ ಬಹಳ ವ್ಯತ್ಯಾಸ ಉಂಟು ತುಲಸಿ ರಾಮಾಯಣದಲ್ಲಿ ಸಾರ ವರ್ಧಕ ವಿಚಾರಗಳೇ ಹೆಚ್ಚಾಗಿ ವರ್ಣಿತವಾಗಿದೆ. ನಮ್ಮ ವಿಷಯದಲ್ಲಿ ವಾಲ್ಮೀಕಿ ರಾಮಾಯಣವು ಕೇವಲ ಲೌಕಿಕ ಗ್ರಂಥವೇ ಆಗಿದೆ, ಆದರೆ ತುಲಸಿ ರಾಮಾಯಣವು ವೇದ ಪ್ರ ಣಾಣಗಳ ಸಾರವೇ ಆಗಿದೆ ಈ ಗ್ರಂಥವು ಫ್ರೆಂಚ್, ಇಂ ಗ್ಲಿಷ್, ಇಟಾಲಿಯನ್, ಲ್ಯಾಟಿನ್ ಮುಂತಾದ ವಿವಿಧ ಭಾ ಷೆಗಳಿಗೆ ಸರ್ವಸಮ್ಮತವಾಗಿದೆ. ಹಲವು ಸಾಹಿತ್ಯಕರು ಈ ಗ್ರಂಥವನ್ನು ಬಹಳವಾಗಿ ಹೊಗಳಿರುವರು." ರೆವರೆಂಡ್‌ತೇ ಸಾಹೆಬರು ಹೀಗೆನ್ನುವರು " ಹಿಂದೀಸಾಹಿತ್ಯದಲ್ಲಿ ಸುಪ್ರಸಿ ದ್ಧವಾದ ಹೆಸರು ಶ್ರೀ ತುಳಸೀದಾಸರದು. ಇವರ ಹಿಂದೀ ರಾಮಾಯಣವು ಕೇವಲ ಹಿಂದೂಸ್ಥಾನದಲ್ಲಿ ಮಾತ್ರವೇ ಅಲ್ಲ ದೆ, ಇಡೀ ಜಗತ್ತಿನಲ್ಲಿ ಕೀರ್ತಿಯನ್ನು ಹೊಂದಿದೆ" ಮತ್ತು ಸರ್ ಮೋನಿಯರ್ ವಿಲ್ಲಿಯಮ್ಸ್‌ರು ಈ ಪುಸ್ತಕವನ್ನು ಕುರಿ ತು ಹೀಗೆ ಉಲ್ಲೇಖಿಸಿರುವರು :—" ತುಲಸಿ ರಾಮಾಯಣವು ವಾಲ್ಮೀಕಿ ರಾಮಾಯಣದ ಭಾಷಾಂತರವಲ್ಲ, ಅದು ಕೇವಲ ಸ್ವತಂತ್ರವೂ ನವೀನವೂ ಆದ ಮಹಾ ಗ್ರಂಥವು."

"ಶ್ರೀ ಚಾಸತೀ ವಲ್ಲಭೋ ವಿಜಯತೇ" ಎಂಬ ಮಾತೇ ಇಡ

ವರ್ತಮಾನ ಸಂಗ್ರಹ.

ಒಳದೇಶ.

ಚೀಫ್ ಕಮಿಷನರವರು ತಾ ೨೮ನ್ನು ಮಡಿಕೇರಿಯಿಂ ದಲೂ ತಾ ೨೯ನ್ನು ಕಾಸ್ಪೆಂಬ್ಲಿಯಿಂದಲೂ ಸಾರ್ವಜನಿಕರಿಗೆ ಭೇಟಿಕೊಡುವರು.

ಬೆಂಗಳೂರಿನಲ್ಲಿ ಈ ತಿಂಗಳ ೧೭ನೇ ತಾರೀಖಿನಲ್ಲಿ ಜರಗಿದ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಮುಂದಿನ ಕಾಂಗ್ರೆಸ್ ಅಧಿವೇಶನವು ಬೆಳಗಾವಿಯಲ್ಲಿ ಜರಗಬೇಕೆಂದು ನಿರ್ಣಯಿಸಲಾಗಿದೆ.

ಬೆಂಗಳೂರಿನಲ್ಲಿ ಈ ತಿಂಗಳ ೨೨ನೇ ತಾರೀಖಿನಲ್ಲಿ ಜರಗಿದ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಮುಂದಿನ ಕಾಂಗ್ರೆಸ್ ಅಧಿವೇಶನವು ಬೆಳಗಾವಿಯಲ್ಲಿ ಜರಗಬೇಕೆಂದು ನಿರ್ಣಯಿಸಲಾಗಿದೆ.

ಬೊಂಬಾಯಿಯಲ್ಲಿ ಒಡುತ್ತಿದ್ದ ನೆಲ್ ಮನೆಯಂಡ ಕಾರ್ಯಪ್ಪನವರು ಬಿ. ಎ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವರು.

ಮೂರ್ನಾಡು ಕೋಡಂಬೂರು ಗ್ರಾಮದ ಮೂಡೆರವು ಯಲ್ಲಿ ಬಬ್ಬು ಹೆಂಗಸು ಮೂರುಮಕ್ಕಳನ್ನು ಹೆತ್ತಳೆಂದೂ ಅವುಗಳಲ್ಲಿ ಎರಡು ಹೆಣ್ಣು ಮಕ್ಕಳು ಮೃತಪಟ್ಟವೆಂದೂ ತಿಳಿಯಬರುತ್ತದೆ.

ಚೀಫ್ ಕಮಿಷನರವರು ತಾ. 2 ರಲ್ಲಿ ಮಡಿಕೇರಿ ಆಸ್ಪತ್ರೆಯನ್ನೂ, ತಾ 3 ರಲ್ಲಿ ಕಾಸ್ಪೆಂಬ್ಲಿ ಫೈಸ್ಕೂಲಿನಲ್ಲಿಯೂ, ತಾ ೪ ರಲ್ಲಿ ಸೆಂಟ್ರಲ್ ಫೈಸ್ಕೂಲು ಮತ್ತು ಕೋಟೆಯನ್ನೂ ಸಂದರ್ಶಿಸಿದರು.

ಬ್ರೀಚಾಸು ಕಂಟ್ರಾಕ್ಟು ಆಫೀಸಿನ ವಿಷಯ ಬಹಿರಾಧಾರ ಸಂಘದವರು ತಾ 3ರಲ್ಲು ಕೆಳಿಹಸಿದ ಪೆಟ್ಟಿಶನ್ನಿನ ಸಂಗತಿ ಚೀಫ್ ಕಮಿಷನರವರು ಸಾವಾಸುಭಾಷಿಯಿಂದ ಮಾತಾಡಿದರೆಂದು ತಿಳಿಯುತ್ತೇವೆ

ಪುಲಿಯಂಡ ಮುದ್ದಪ್ಪನವರ ಪತ್ನಿಯವರು ಮೂರುಗಂಟ್ಲು ತಿಂಗಳಿಂದ ಟಾಯಿಲೆಯಿಂದಿದ್ದವರು ತಾ 22-10-25ರಲ್ಲು ರಾತ್ರಿ ತಿವಾದೀನರಾದರೆಲ್ಲದೆ ರಕ್ಷಕಾರಿ ಪಕ್ಷಣಿ ಸ್ಯಕರಾಗಿರಲ್ಲವೆಂದು ಬಂದು ಜಾತ್ಯಿ.

ಮೈಸೂರು ಮಹಾರಾಜರವರು ಮಡಿಕೇರಿಯ ಸುಪಜೀವನೆಗಾಗಿ ದಾಟಿ ಹೋಗುವಂತೆ ಅವರನ್ನು ವಿಜ್ಞಾಪಿಸಿಕೊಳ್ಳಬೇಕೆಂದು ಆ ಬೀದಿಯವರು ಕಮಿಷನರವರಿಗೆ ಬರೆದುಕೊಂಡಿರುವರೆಂದು ವರ್ತಮಾನ

ಮೀ. ಸಡಿಕೇರಿಯಂಡ ಕಾಳಪ್ಪನವರು ಸಂಬಾರು ಡಿಸ್ಟ್ರಿಕ್ಟ್ ಪೋಲೀಸು ಸುಪರಿಂಟೆಂಡೆಂಟರ ಕೈಕೆಳಗೆ ಡಿಪ್ಲಿ ಟೆಸಿಯಲ್ ಇನ್ಸ್‌ಪೆಕ್ಟರ ಕೆಲಸಕ್ಕೆ ಎಂದುತಿಂಗಳು ತರಬೇತಿ ಹೊಂದಿಲು ಈ ತಾ. 2ರಲ್ಲಿ ಕಲ್ಲಿಕೋಟೆಗೆ ಹೋದರು.

ಮೈಸೂರು ಮಹಾರಾಜರವರ ಯಾತ್ರಿ ವಿಶೇಷಾದಿಗಾಗಿ ಭಾಗಮಂಡಲದಲ್ಲಿಯೂ ಮಡಿಕೇರಿಯಲ್ಲಿಯೂ ಸೆಷ್ಯಲ್ ಸ್ ಟೆಲಿಗ್ರಾಫಿನ (ತಂತಿ ಇಲ್ಲದೆ ಸರ್ವಾಪೂಸ ಕೊಡುವ) ಯಂತ್ರಗಳನ್ನಿಟ್ಟು ಮೈಸೂರಿಗೆ ತಾರು ಕಳುಹಿಸಿ ತ್ತಿದ್ದಾರೆ.

ಕಳೆದ ತಾ 31ರಲ್ಲು ಚೆಮ್ಮಂಡಾಣಿಯಲ್ಲಿಯೂ, ತಾ 1—11—'25ರಲ್ಲಿ ಕಕ್ಕಬೆಯಲ್ಲಿಯೂ, ತಾ 2—11—'25ರಲ್ಲು ನೆಲಜಿ ಸ್ಕೂಲು ಬಳಿಯಲ್ಲಿಯೂ ದಕ್ಷಿಣ ಕೊಡಗಿನ ಸಹಕಾರ ಸಂಘಗಳ ಗೌರವ ಪ್ರಚಾರಕರು ಸಹಕಾರ ಕಾನಫರೆನ್ಸ್‌ಗಳನ್ನು ನಡಿಸಿದರು.

ಚೀಫ್ ಕಮಿಷನರವರು ಮತ್ತು ಮಿಸೆಸ್ ಪೀಯರ್ಸ್ ರವರು ತಾ. 2ರ ಸಾಯಂಕಾಲ 'ಪೊಯರ' ಒಂಗ್ಲೆಯಲ್ಲಿ ಕೌನ್ಸಿಲರ್ ಮೆಂಬರುಗಳಿಗೂ, ಅವರ ಭೇಟಿಗೆ ಹೋಗಿದ್ದ ಪಂಚಾಯೀದಿಗೂ ಒಂದು 'ಎಟ್‌ಹೋಮ್' ಕೊಟ್ಟರು. ಅಲ್ಲಿ ಟ್ರಿನ್ನಿಸ್ ಆಟವೂ ಇತ್ತು.

ದೇಶದಲ್ಲಿ ಮಳೆ ಇಷ್ಟಿದೆ ಹಲವು ಕಡೆಗಳಲ್ಲಿ. ನುಚ್ಚುನಾಗಿ ಹೊಳೆತರೆಗಳಲ್ಲಿಯೂ ಬೆಚ್ಚನಾಲುಗಳಲ್ಲಿಯೂ ಗದ್ದೆಗಳಲ್ಲಿ ನೀರು ಬತ್ತಿಹೋಗಿದೆ ಕದುರು ಡಾಬುವ ಈ ಸಮಯದಲ್ಲಿ ಬಂದಿರಿಂದು ಮಳೆ ಇಲ್ಲದೆ ಹೋದರೆ ಬೇಗೆ ತಂಬಾ ಸಸ್ಯವುಂಟಾಗುವದರಿಂದ ಬೈತಲ್ಲಿ ಅಸಂಖ್ಯಾತ ಹುಟ್ಟಿದೆ.

ಈಗ ಇಂಗ್ಲೆಂಡಿನ ಸ್ಯಾಂಡ್ ಹರ್ಸ್ಟ್ ಮಿಲಿಟರಿ ಕಾಲೇಜಿನಲ್ಲಿರುವ ಮೆ ಕೊಡಂಬೆಯ ಡಿ. ಪೊನ್ನಯ್ಯನವರು ಒಂಬತ್ತು ತಿಂಗಳುಗಳ ಹಿಂದೆ ಮೋಟಾರು ಬೈಸಿಕಲಿನಲ್ಲಿ ಹೋಗುತ್ತಿರುವಾಗ ಮೋಟಾರು ಕಾರು ಅವರಿಗೆ ಬಡಿದು ಒಂದು ಕಾಲು ಮುರಿದುಹೋಗಿದೆಯೆಂದೂ ಅದು ಈಗ ವಾಸಿಯಾಗುತ್ತಿದೆಯೆಂದೂ ತಿಳಿಯಬರುತ್ತದೆ.

ಮೇಜರ್ ಪ್ಲೂಮರ್‌ರವರು ಒಂದು ಕ್ರಿಕೆಟ್ ಟೀಮಿನ ಸಮೇತ ಬೆಂಗಳೂರಿಂದ ತಾ. 7ರಲ್ಲಿ ಮಡಿಕೇರಿಗೆ ಒಂದು ತಿಲ್ಲಿ ಕೊಡಗು ಜಮ್ಮಾನ ಟೀಮಿನೊಡನೆ ಪಂದ್ಯವಾಟವಾಡುವರೆಂದು ಸುದ್ದಿ. ಮೊತಾಟಕ್ಕೆಂದು ಪ್ರಕಟಿಸಲ್ಪಟ್ಟಿರುವ ಅವರ ಮೋಟಾರು ಕಾರನ್ನು ತೆಗೆದುಕೊಳ್ಳಲು ಇಚ್ಛೈಸುವವರಿಗೆ ಅದನ್ನು ನೋಡಲು ಇದು ಒಳ್ಳೇ ಸಮಯ.

ಅಮ್ಮತ್ತಿ ಮತ್ತು ಹುದಿಕೇರಿಯಲ್ಲಿ ನಡೆದ ಕೊಡವರ ವಿಷಯಂಗಳಲ್ಲಿ ಕೊಡವಸಭೆ ಆವಶ್ಯವಿಲ್ಲವೆಂತಲೂ, ಸಾಧ್ಯವೇ ವರ್ತಾಮನದಲ್ಲಿ ನಡೆದ ವಿಷಯಂಗಿನಲ್ಲಿ ಕೊಡವಸಭೆ ಬೇಕೆಂತಲೂ ತೀರ್ಮಾನವಾಗಿದೆಯೆಂದು ಈ ಮೂರು ವಿಷಯಂಗಳ ಪೈಕಿ ಸೀದಿಂಗ್ಸುಗಳು ನಮ್ಮ ಕೈಸೇರಿವೆ. ಸ್ಥಳಸಂಕೋಚದಿಂದ ಆ ವಿಷಯಗಳನ್ನು ಈವಾರ ಪ್ರಕಟಿಸಲು ಸಾಧ್ಯವಾಗಲಿಲ್ಲ.

ಮೈಸೂರು ಮಹಾರಾಜರವರು ಭಾಗಮಂಡಲದಲ್ಲಿದ್ದಿರುವಾಗ (ತಾ. 7 ರಿಂದ 10 ರ ವರೆಗೆ) ತ್ರಿವೇಣಿ ಸಂಗಮಕ್ಷೇತ್ರವನ್ನು ಹೋಗಲು ವಿಷದಂತೆ ವಿಸರ್ಜಾಗಾ-ತ್ರಿವೆಯೆಂದು ಈದಿವಾರ ಪ್ರಕಟವಾದ ವರ್ತಮಾನವು ಸುಳ್ಳೆಂತಲೂ, ಅಂಥಾ ವಿಷಯವೇ ನೂ ಯೋಚಿಸಲ್ಪಟ್ಟಿರವುದಿಲ್ಲವೆಂತಲೂ ಯಾತ್ರಿಕರು ಇದನ ಅರಿಯಲಿ ಇಲ್ಲದೆ ಕಾವೇರಿಗೆ ಹೋಗಬಹುದೆಂತಲೂ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ತಿಳಿಸುತ್ತಾರೆ.

ವಿದ್ಯಾ ಇಲಾಖೆಯ ಉದ್ಯೋಗಸ್ಥರ ಸಹಕಾರಿ ಸಂಘವನ್ನು ಸ್ಥಾಪಿಸುವ ಉದ್ದಿಶ್ಯ ಸುಮಾರು 75 ಜನ ಉಪಾಧ್ಯಾಯರು ಅಕ್ಟೋಬರು ತಾ 31 ರಲ್ಲು ವೀರರಾಜಪೇಟೆ ಹೋಬಳಿ ಸ್ಕೂಲಿನಲ್ಲಿ ಸೇರಿ, ಇತರ ಕಡೆಗಳ ಉಪಾಧ್ಯಾಯರೇನೇ ಕರು ಹಾಜರಿಲ್ಲದ್ದರಿಂದ ಸದರಿ ನಿರ್ಣಯಗಳನ್ನು ಸಮಂಜರು 22 ನೇ ತಾರೀಖಿನವರೆ 11 ಗಂಟೆಗೆ ನಡಿಸುವಂತೆ ತೀರ್ಮಾನಿಸಿದ್ದಾರೆಂದು ಮೈ. ಯು. ಎಸ್. ಮೊದಪ್ಪನವರು ತಿಳಿಸಿರುತ್ತಾರೆ

ಕೊಡಗು ಇಲೆಕ್ಟ್ರಿಕ್ ಸಂಘದ ನಿರ್ಣಯಂಗೊಂದು ತಾ. 1—11—'25ರಲ್ಲಿ ಸೆಂಟ್ರಲ್ ಫೈಸ್ಕೂಲಿನಲ್ಲಿ ಮೆ. ಸಡಿಕೇರಿಯಂಡ ಚಿಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಸಡೆಯಿತು ಸಂಘದ ಉಪಬಂಧನೆಗಳನ್ನು ತಿದ್ದುಪಡಿಮಾಡಿಲು 5 ಮೆಂಬರುಗಳ ಒಂದ ಕಮಿಟಿಯು ನೇಮಕವಾಯಿತು ಒರುವ ಹಾಕಿಟೂರ್ನಮೆಂಟು ಈ ತಾ. 15ರಿಂದ 25ರವರೆಗೆ ನಡೆಯುವುದರಿಂದ ಈ ಆಟಗಳ ತಾರೀಕನ್ನು ನಿರ್ಣಯಿಸಲು ಸೋಮರು ಮೆಂಬರುಗಳ ಒಂದು ಕಮಿಟಿಯು ವಿಚಾರಿಸಿತು.

ಪೊನ್ನಂಪೇಟೆ ಶಾಲೆಯು ಪಾರ್ಸಿಕೋತ್ಸವವು ತಾ. 31—10—25ರಲ್ಲಿ ಮೆ. ಮನೆಯಂಡ ಚಿಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಸಭ್ಯಂಗಳಿಂದ ಸಡಿಸಿ ತು ದೊಡ್ಡದಾಗಿದ್ದ ಜನ ಸ್ತೋಮವು ಜನಮಿದ ಕಿಕ್ಕಿರಿದಿತ್ತು. ಸುಮಾರು 600 ಜನರು ಸೇರಿದ್ದರು. ಆಟಪಾಠಗಳಲ್ಲಿ ಬಹುಮಾನಿತರಿಗೆ ಬಹುಮಾನಗಳನ್ನು ಕಾಲೇಜು ಸರದಾರ ಅಧ್ಯಕ್ಷರು ಹಾಜರದರು ಪೆನ್ನಂಪೇಟೆ ಸರದಾರರಾಜೆನೆ. ವಂದನೆಯನ್ನು ಒರಿದರು. ಮಕ್ಕಳಿಗೆ ಬಿನ್ನಿ ವಾರದೂಂಡೊಡಗೂಡಿದ ಅಧ್ಯಕ್ಷರ ಭಾಷಣವಾದ ನಂತರ ಮಕ್ಕಳಿಂದ ಶ್ರೀ ಕೃಷ್ಣ ಸಂಧಾನವೆಂಬ ಕನ್ನಡ ನಾಟಕವು ಬಹು ಮನೋಹರವಾಗಿ ಆಭಿನಯಿಸಲ್ಪಟ್ಟಿತು.

ಹಿಂದೂದೇಶ.

ಹಿಂದ್ಯಾಸ್ಥಾನಕ್ಕೆ ಒಬ್ಬ ಹೆಮ್ಮೆಟಿಗಪರ್ಸಾನ್ನೇಮಿಸುವುದೆಂಬ ವರ್ತಮಾನವಿದೆ.

ಬೊಂಬಾಯಿ ವಿಧಾನಸಭೆಯವರು ಸಟ್ಟಿದಲ್ಲಿ ಅರ್ಧ ಭಾಗದಲ್ಲಿ ಹೊಸ ಮತ್ತು ಕೆಟ್ಟಾನು ಪ್ಯೆರುವ ಸಿಬ್ಬಂಧಿಯನ್ನು ಸ್ವಾಧೀನಪಡಿಸಿರುವರು.

ಪೂನಾದಲ್ಲಿ ಒಕ್ಕಲಾಟನದ ಪದಾರ್ಥಗಳ ಪ್ರದರ್ಶನವು ಡಿ. ಬೆಂಗಳೂ ನಡೆಯುತ್ತಿದೆ ಇದಕ್ಕೆ ಕೊಲ್ಲಾಪುರದ ಮಹಾರಾಜರು ಹತ್ತು ನಾವಿರ ರೂಪಾಯಿ ಗಳನ್ನು ಕೊಟ್ಟಿದ್ದಾರೆ

ಎಗ್ಮೂರ್‌ನ ಬೆಂಗಾಡಿನಲ್ಲಿ ಅಧಿಕೃತರಾಗಿದ್ದ ಕೈಬಿ ಅನೇರಿಮಲೈ ಎತ್ತಿನಗಾಡಿ ಶೈತ್ರಿಕರು ಲಿಪ್ಟೆ ಖಾತರಿಯ ಬಂಡಿಯಂದ ವೈದ್ಯಸಾಯವಾಗಿ ನೇಮಿಸಲ್ಪಟ್ಟಿರುವರು.

ಮೆ. ಎಸ್ ಆರ್ ದಾಸ್‌ರವರು ಸರ್ ಪಿ. ಎನ್. ಸರ್ವಾಧಿಕಾರಿಯಾದ ಕಳೆದ ತಾ 1ನೇ ವೈಸರಾಯರ ಎಗ್ಸಿಕ್ಯುಟಿವ್ ಕೌನ್ಸಿಲಿನ ಸೆಂಬರ್‌ತನದ ಚಾರ್ಜನ್ನು ಪಹಿಸಿಕೊಂಡರು.

ತಿರುವಾಂಕೂರು ಸಂಸ್ಥಾನದಲ್ಲಿ ಬೇಕಾಗಿರುವ ಆರಂಭ್ರೋಪೇಸರು ಪೊಲೀಸ್ ಇನ್‌ಸ್ಪೆಕ್ಟರುಗಳ ಹುದ್ದೆಗಳಿಗೆ ಸುಮಾರು 600 ಅರ್ಜಿಗಳು ಬಂದಿರೆಯೆಂದೂ, ಅವುಗಳಲ್ಲಿ ಶೇಕಡ 25 ರಷ್ಟು ಗ್ರಾಜ್ಯುವೇಟರುಗಳದ್ದೆಯೆಂದೂ ಸುದ್ದಿ.

ಅಖಿಲಭಾರತ ವಿದ್ಯಾರ್ಥಿ ಸಭೆಯನರ ಈ ವರ್ಷದ ಕೆಲಸವು ಕುಂಚಾ ತೃಪ್ತಿಕರವಾಗಿದೆ ಕಳೆದ ವರ್ಷ 210 ನಿರವಾಗಿ ನಿಂತಾಗಳು ಮಾತ್ರ ಮಾಡಿಸಲ್ಪಟ್ಟರೂ ಈ ವರ್ಷ ಅಂಥಾ ವಿವಾಹಗಳ ಸಂಖ್ಯೆಯು 1250ಕ್ಕೆ ಏರಿದೆ

ಸ್ವರಾಜ್ಯ ಪಾರ್ಟಿಯ ಕಾರ್ಯನಿರ್ವಾಹಕ ಕಮಿಟಿಯು ವಿಸ್ತರಿಸಿದ ತಾ 2ರಲ್ಲು ನಾಗಸುರದಲ್ಲಿ ಸಡೆದ. ಸೆಂಟ್ರಲ್ ವ್ಯಾಸಂಬೆಯ ಸಿ. ಶಾಮಿಯಂಗರ, ಎಸ್ಸಿಸ್ಯೆಂಟಿವ್ ಕೌನ್ಸಿಲರ್ ಪದವಿ ಒಪ್ಪಿಕೊಂಡಿದ್ದನ್ನು ಖಂಡಿಸಿದ್ದಲ್ಲದೆ ಆ ಪಾರ್ಟಿಯ ಕಾರ್ಯಾಧ್ಯಕ್ಷಸ್ಥಾನವನ್ನು ತತ್ಕಾಲ ಬಿಡುವಂತೆಯೂ ಸೂಚಿಸಿಲ್ಲವೆಂದೂ ತೀರ್ಮಾನಿಸಿದರು.

ಬೊಂಬಾಯಿಯ ಗಿರಣಿ ಕೆಲಸಗಾರರ ಮುಷ್ಕರವು ಮುಗಿದಿರುವುದಿಲ್ಲ. ಸುಮಾರು ನಾಲ್ಕು ಸಾವಿರ ಜನರು ಮಾತ್ರ ಕೆಲಸಕ್ಕೆ ಪುನಃ ಸೇರಿರುವರು. ಬಾಕಿಯವರು ಕಸ್ಟ ಸಹಾಯಕ ಸಂಘಗಳಿಂದ ಆಹಾರ ಸಾವಿ.ಗಳ ಸಹಾಯ ಪಡೆದು ಬರುವ ಜನವರಿಯ ತಿಂಗಳವರೆಗೆ ಮುಷ್ಕರನ್ನು ಮುಂದಿಲಿಸುವ ಯೋಚನೆಯಲ್ಲಿರುವರೆಂದು. ವರ್ತಮಾನ.

ನಿವೇಶ.

ಬ್ರಿಟಿಷ್ ಸಾಮ್ರಾಜ್ಯದ ಮೆಂಬ್ಲಿ ಪ್ರದರ್ಶನವು ತಾ. 1ರಲ್ಲಿ ಸ್ಟೇಷನ್ ಆಫ್ ಜೀರ್ಕಾರದವರಿಂದ ಮುಕ್ತಾಯಗೊಳಿಸಲ್ಪಟ್ಟಿತು ಪರ್ಯಾಯದ ಪೆಟ್ಟಿಸ್ ಸಭೆಯು ಅಲ್ಲಿಯೂ ಅವಸರಾದ (ಪಾ) ಕೆಜಾಕನ್ಸಂತರಸರನ್ನು ತೆಗೆದು ಹಾಕಿ ಕೆಜಾಖಾನಾ ಪಲ್ಲಿಯವರನ್ನು ತತ್ಕಾಲ ಅಧಿಕಾರಕ್ಕೆ ತಂದಿರುವೆರು. ಮುಂದಿನ ಸರ್ಕಾರದ ರಚನೆಯನ್ನು ತಯಾರಿಸುವ ಜವಾಬ್ದಾರಿಯ ಸಭೆಯ ಮೇಲಿದೆ.

ಫ್ರೆಂಚ್ ಸೈನಿಕರು ಸಿರ್ಯಾದ ದಮಸ್ಕ್ಸ್ ಪಟ್ಟಣವನ್ನು ಮುತ್ತಿಗೆ ಹಾಕಿ ಅಲ್ಲಿ ನಡಿಸಿರುವ ಅಕೃತ್ಯಗಳು ತುಲವು ಕತೆಯು ಮನಮ್ಮುದೀಯದಲ್ಲಿ ಅನುಕೂಪಾನವನ್ನು ಉಂಟುಮಾಡಿದೆ. ಈ ವಿಷಯ ಜನತಾಂಗಗಳ ಕೂಟದವರು ಫ್ರೆಂಚ್ ಅಧಿಕಾರಿಗಳ ವಿವರಣೆಯನ್ನು ಕೇಳಿರುವರು.

